# ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥರು

## ಇಪ್ಪತ್ತನೆಯ ಶತಮಾನದ ಅಸಾಧಾರಣ ಸಂತರ ಸ್ಫೂರ್ತಿದಾಯಕ ಜೀವನಚರಿತ್ರೆ



ಶೃಂಗೇರಿ ಶ್ರೀ ಶಾರದಾಪೀಠದ ಮೂವತ್ತೈದನೆಯ ಜಗದ್ಗುರು ಶಂಕರಾಚಾರ್ಯರು

ಜನ್ಮಶತಾಬ್ದಿ ೨೦೧೭

ಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಇಪ್ಪತ್ತನೆಯ ಶತಮಾನದ ವಿಶಿಷ್ಟ ಸಂತರು. ಸದ್ಗುರುಗಳಾದ ಅವರ ಜೀವನ ಅಸಾಮಾನ್ಯವಾಗಿತ್ತು. ಹದಿಮೂರನೆಯ ಎಳೆಯ ವಯಸ್ಸಿನಲ್ಲಿ ಪ್ರಾಪಂಚಿಕ ಜೀವನವನ್ನು ತೊರೆದು, ಯೋಗಾಭ್ಯಾಸದ ಮೂಲಕ ಅತ್ಯದ್ಭುತ ಆಧ್ಯಾತ್ಮಿಕ ಜೀವನ ಯಾತ್ರೆಯನ್ನು ನಡೆಸಿದರು. ಹದಿನೆಂಟನೆಯ ವಯಸ್ಸಿನಲ್ಲಿಯೇ ಸತ್ಯದ ಸಾಕ್ಷಾತ್ಕಾರವನ್ನು ಹೊಂದಿ, ಯೋಗದ ಪರಾಕಾಷ್ಠತೆಗೆ ತಲುಪಿದ್ದರು. ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ೩೫ನೆಯ ಶಂಕರಾಚಾರ್ಯರಾಗಿ, ದೇಶಾದ್ಯಂತ ಅಸಂಖ್ಯಾತ ಜನರಿಗೆ ಶ್ರೇಯಸ್ಸನ್ನುಂಟುಮಾಡಿದರು.

ಈ ಪುಸ್ತಕದಲ್ಲಿ ಸದ್ಗುರುಗಳಿಗೆ ಪ್ರಿಯವಾದ ಉದಾತ್ತ ಮೌಲ್ಯಗಳ ಬಗ್ಗೆ, ಪೂಜ್ಯರ ವಿಶೇಷ ಆಧ್ಯಾತ್ಮಿಕ ಸಾಧನೆಯ ಬಗ್ಗೆ, ಅವರ ಪ್ರಬಲವಾದ ಅನುಗ್ರಹಶಕ್ತಿಯ ಪ್ರಭಾವ, ಪ್ರಸನ್ನಚಿತ್ತತೆ, ಎಲ್ಲ ರೀತಿಯ ಜನರೊಂದಿಗೆ ಸ್ನೇಹಪರತೆ, ಬಹುಮುಖ ಸಾಮರ್ಥ್ಯ, ತೀರ್ಥಯಾತ್ರೆಗಳು ಮತ್ತು ಬೋಧನೆಗಳು, ಪ್ರತಿಯೊಬ್ಬ ಜೀವಿಯ ಬಗ್ಗೆ ಇದ್ದ ಅಪಾರ ಅನುಕಂಪ ಮುಂತಾದ ಇನ್ನೂ ಹಲವಾರು ಅಂಶಗಳ ಬಗ್ಗೆ ಇರುವ ಚಿತ್ರ-ಕಥೆಗಳು ಮಕ್ಕಳಾಗಲಿ ದೊಡ್ಡವರಾಗಲಿ, ಓದುಗರೆಲ್ಲರ ಮನಸೆಳೆದು ಸ್ಫೂರ್ತಿಯನ್ನುಂಟುಮಾಡುವುದರಲ್ಲಿ ಸಂಶಯವೇ ಇಲ್ಲ.

ಈ ಪುಸ್ತಕವು ಪೂಜ್ಯರ ಜನ್ಮಶತಾಬ್ದಿಯ ಸಂದರ್ಭದಲ್ಲಿ ಅಕ್ಷರಕೊಡುಗೆಯಾಗಿ ರಚಿತವಾಗಿದ್ದು, ಅವರ ಅಸಾಧಾರಣ ಜೀವನಗಾಥೆಯನ್ನು ಕೊಂಡಾಡುವುದಾಗಿದೆ.

ಈ ಪುಸ್ತಕವು ನಾಲ್ಕು ಭಾಷೆಗಳಲ್ಲಿ (ಆಂಗ್ಲ, ಕನ್ನಡ, ತಮಿಳು ಮತ್ತು ಹಿಂದಿ) ಮುದ್ರಿತವಾಗಿ, **45000**ಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಪೂಜ್ಯರ **101**ನೆಯ ಜನ್ಮೋತ್ಸವದ ವರ್ಷವಾದ **2018**ರಲ್ಲಿ ಈ ಪುಸ್ತಕವನ್ನು ಡಿಜಿಟಲ್ ರೂಪದಲ್ಲಿ ಪ್ರಕಟಿಸಲಾಗುತ್ತಿದೆ.

**First Digital Edition (Kannada)**: November 2018

**e-Book ISBN:** 978-93-5288-152-9

9 789352 881529

**Design, Script in English:** Dr. Meenakshi Lakshmanan

**Illustrations:** Art Nutzz, Chennai 600 029


**Art Work Compilation:** Dr. Rajitha Venkateswaran
Dr. Suganya Ramadoss
Dr. Meenakshi Lakshmanan

**Translation into Kannada:** Dr. Gowri Srinivasa
**Tamil:** Dr. Suganya Ramadoss
**Hindi:** Dr. Meenakshi Lakshmanan

**Published by:** Dr. Meenakshi Lakshmanan, Chennai
© Meenakshi Lakshmanan, 2018
E-mail: meenakshi.lakshmanan@gmail.com

**www.AbhinavaVidyatheertha.org**

# ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥರು



ಇಪ್ಪತ್ತನೇ ಶತಮಾನದ ಆರಂಭದ ಸಮಯ. ರಾಮ ಶಾಸ್ತ್ರಿ ಹಾಗೂ ವೆಂಕಟಲಕ್ಷ್ಮಮ್ಮ ಧಾರ್ಮಿಕ ಶ್ರದ್ಧೆಯುಳ್ಳ ದಂಪತಿಗಳು ಬೆಂಗಳೂರಿನಲ್ಲಿ ತಮ್ಮ ಸಾಧಾರಣವಾದ ಮನೆಯಲ್ಲಿ ಮಗು ಸೀತಾಲಕ್ಷ್ಮಿಯೊಂದಿಗೆ ವಾಸವಾಗಿದ್ದರು.

ವೆಂಕಟಲಕ್ಷ್ಮಮ್ಮ ಎರಡನೆ ಮಗುವಿಗೆ ಗರ್ಭಧರಿಸಿದ್ದಾಗ ಅವರು ಪ್ರತಿದಿನವೂ ಅಶ್ವತ್ಥವೃಕ್ಷಕ್ಕೆ ಪ್ರದಕ್ಷಿಣೆ ಮಾಡುತ್ತಿದ್ದರು.




1917 ನವೆಂಬರ್ 13ರ ಬೆಳಗಿನ ಜಾವದಲ್ಲಿ, ಇಡೀ ದೇಶವೇ ಸಂಭ್ರಮದಿಂದ ದೀಪಾವಳಿ ಹಬ್ಬವನ್ನು ಆಚರಿಸುತ್ತಿದ್ದಾಗ, ವೆಂಕಟಲಕ್ಷ್ಮಮ್ಮ ಒಂದು ಮುದ್ದಾದ ಮಗುವಿಗೆ ಜನ್ಮಕೊಟ್ಟರು.






ಸೂಕ್ತ ಸಮಯದಲ್ಲಿ, ಶ್ರೀನಿವಾಸನು ಮುನಿಸಿಪಲ್ ಶಾಲೆಗೆ ಹೋಗಲು ಪ್ರಾರಂಭಿಸಿದನು.




ಸ್ವತಃ ಉತ್ತಮವಿದ್ಯಾರ್ಥಿಯಾಗಿದ್ದುದಲ್ಲದೆ, ಮಾರ್ಗದರ್ಶನ ಕೋರಿಬಂದ ಇತರ ವಿದ್ಯಾರ್ಥಿಗಳಿಗೂ ಮನಃಪೂರ್ವಕವಾಗಿ ಸಹಾಯ ಮಾಡುತ್ತಿದ್ದನು.


ಮನೆಯಲ್ಲಿಯೂ ಸಹಾಯಕವಾಗಿದ್ದು ಮನೆ ಕೆಲಸಗಳಲ್ಲಿ ಭಾಗಿಯಾಗುತ್ತಿದ್ದನು.




ಒಮ್ಮೆ ಶ್ರೀನಿವಾಸನಿಗೆ ನೆರೆಮನೆಯಿಂದ ಆರ್ತನಾದ ಕೇಳಿ ಬಂದಿತು.
ಓದುವುದಿಲ್ಲವೇ? ಈ ಭಾರವನ್ನು ಹೊತ್ತುಕೊ!
ಊ...
ಆ ಬಾಲಕ ನೋವಿನಿಂದ ಮುಲುಗುಡುತ್ತಿದ್ದ.
ಬೇರೆಯವರಿಗಾಗಿ ಶ್ರೀನಿವಾಸನು ತಾನು ನೋವನ್ನು ಅನುಭವಿಸಲು ಸದಾ ಸಿದ್ಧನಿರುತ್ತಿದ್ದನು.
ದಯವಿಟ್ಟು ನಿಮ್ಮ ಮಗನಿಗೆ ಸ್ವಲ್ಪ ವಿಶ್ರಾಂತಿ ಕೊಡಿ. ನಾನು ಭಾರವನ್ನು ಹೊರುವೆ.
ಶ್ರೀನಿವಾಸನ ಅಂತಃಕರಣಕ್ಕೆ ಮನಸೋತು, ಆತ ಮಗನ ಶಿಕ್ಷೆಯನ್ನು ನಿಲ್ಲಿಸಿದನು.
ಒಂದು ದಿನ ಮನೆಯಲ್ಲಿ ಬಡಿಸಿದ ಖಾರವಾದ ತಿಂಡಿಯನ್ನು ಹುಡುಗರು ಅರಿವಿಲ್ಲದೆ ತಿಂದುಬಿಟ್ಟರು.
ನೀರು!
ಬೆಲ್ಲ!
ಇಷ್ಟೊಂದೆಲ್ಲ ಗದ್ದಲ ಯಾತಕ್ಕಾಗಿ?
ಶ್ರೀನಿವಾಸ, ಬೊಗಸೆ ತುಂಬಾ ಹಸಿಮೆಣಸನ್ನು ಸದ್ದಿಲ್ಲದೆ ತಿನ್ನು ನೋಡೋಣ!
ಶ್ರೀನಿವಾಸನು ಆ ಸವಾಲನ್ನು ಒಪ್ಪಿಕೊಂಡನು. ಒಂದಾದಮೇಲೊಂದು ಮೆಣಸು ಅವನ ಬಾಯೊಳಗೆ ಸೇರುತ್ತಾಹೋಯಿತು!
ಹೀಗೆ ಹಸಿಮೆಣಸನ್ನು ತಿನ್ನುವುದು ಬೇಕಿಲ್ಲ. ನಮಗೆ ದೊರಕಿದ ಆಹಾರದಿಂದ ತೃಪ್ತರೂ ಹಾಗೂ ಕೃತಜ್ಞರೂ ಆಗಿರಬೇಕೆಂದು ನಿಮಗೆ ಮನವರಿಕೆ ಮಾಡುವುದಕ್ಕೆ ಮಾತ್ರ ಈ ರೀತಿ ಮಾಡಿದ್ದು.
ಶ್ರೀನಿವಾಸನು ಸದಾ ತಾಳ್ಮೆಯಿಂದಿರುತ್ತಿದ್ದನು. ಒಂದು ದಿನ, ಅವನ ಸಹಿಷ್ಣುತೆ ಯಾವ ಮಟ್ಟದ್ದೆಂದು ಪರೀಕ್ಷಿಸಿ ನೋಡಲು ಮಿತ್ರರು ನಿರ್ಧರಿಸಿದರು.
ಹುಡುಗರೆಲ್ಲಾ ದಾರುಣವಾಗಿ ಒಂದೇಸಮನೆ ಹೊಡೆದರು. ಹೊಡೆಯುವುದನ್ನು ನಿಲ್ಲಿಸಿದಾಗ, ಅದರಿಂದ ಉಂಟಾದ ಗಾಯಗಳನ್ನು ನೋಡಿ ಗಾಬರಿಗೊಂಡರು. ಆದರೆ, ಅಂತಹ ಸಂದರ್ಭದಲ್ಲಿಯೂ ಶ್ರೀನಿವಾಸನು ಅವರೊಡನೆ ಒಳ್ಳೆಯ ಮಾತುಗಳನ್ನೇ ಆಡಿದನು.
ಒಮ್ಮೆ ರಾಜನೊಬ್ಬ ಬೌದ್ಧ ಸಂನ್ಯಾಸಿಗೆ ಕಾರಣವಿಲ್ಲದೆ ಚಿತ್ರಹಿಂಸೆ ಕೊಟ್ಟನು. ಕೊನೆಗೆ, ಚಕ್ರವರ್ತಿಯು ತನ್ನ ತಪ್ಪನ್ನು ಅರಿತು ಕ್ಷಮೆ ಕೇಳಿದನು. ಸಹಿಷ್ಣುತೆಯೊಂದರಿಂದ ಸಂನ್ಯಾಸಿಯು ಚಕ್ರವರ್ತಿಯನ್ನೇ ವಿನೀತನನ್ನಾಗಿ ಮಾಡಿದನು.
ಶ್ರೀನಿವಾಸನ ಮನೋದಾರ್ಢ್ಯವನ್ನು ಅವರು ಬಲಪ್ರಯೋಗದಿಂದ ಮುರಿಯಬೇಕೆಂದು ಹೊರಟಿದ್ದರು, ಅದರ ಬದಲಾಗಿ ಶ್ರೀನಿವಾಸನ ಸಹನಶೀಲತೆಯೇ ಅವರನ್ನು ಗೆದ್ದಿತು!


ಒಮ್ಮೆ, ಒಬ್ಬ ಹುಡುಗ ಚಿಟ್ಟೆಗಳ ರೆಕ್ಕೆಯನ್ನು ಕತ್ತರಿಸಿ, ಆ ಅಸಹಾಯಕ ಕೀಟಗಳನ್ನು ನಾಯಿಗೆ ತಿನ್ನಲು ಹಾಕುತಿದ್ದನು.
ಶ್ರೀನಿವಾಸನು ತ್ವರಿತವಾಗಿ ಅವನ ಕೈಗಳನ್ನು ಹಿಡಿದು ತಿರುಚಿದನು.
ಹಾ...! ಬಿಟ್ಟು ಬಿಡು!
ಆ ನಿರುಪದ್ರವಿ ಕೀಟಗಳನ್ನು ಹಿಂಸಿಸಬೇಡ. ಅವಕ್ಕೂ ಅಷ್ಟೇ ನೋವಾಗುತ್ತದೆ.
ಶ್ರೀನಿವಾಸನು ಸೈರಣೆಯಿಂದಿರುತ್ತಿದ್ದನು, ಸ್ವಭಾವತಃ ಯಾರಿಗೂ ನೋವನ್ನುಂಟುಮಾಡುತ್ತಿರಲಿಲ್ಲ. ಹಾಗಿದ್ದರೂ ಇತರರಿಗೆ ಬಾಧೆ ಕೊಡುವವರನ್ನು ತಡೆಯಲು ಸಾಹಸ ಮತ್ತು ಬುದ್ಧಿವಂತಿಕೆಯಿಂದ ಸಂದರ್ಭಕ್ಕೆ ಅನುಗುಣವಾದ ಕ್ರಮವನ್ನು ತೆಗೆದುಕೊಳ್ಳುತ್ತಿದ್ದನು.
ಹತ್ತಿರದಲ್ಲೇ ಒಂದು ಸರೋವರವಿತ್ತು. ಅದು ದೆವ್ವಗಳಿಂದ ತುಂಬಿದೆ ಎಂಬ ಪ್ರತೀತಿ ಇದ್ದಿದ್ದರಿಂದ ಅಲ್ಲಿಗೆ ಸೂರ್ಯ ಮುಳುಗಿದ ಮೇಲೆ ಯಾರೂ ಹೋಗುತ್ತಿರಲಿಲ್ಲ. ಚಿಕ್ಕವನಾಗಿದ್ದರೂ ಶ್ರೀನಿವಾಸನಿಗೆ ಅಂತಹ ಯಾವ ಭಯವೂ ಇರಲಿಲ್ಲ.
ರಾಮ ರಾಮ!
ಮಿತ್ರರ ಸವಾಲನ್ನು ಸ್ವೀಕರಿಸಿ, ಅಮಾವಾಸ್ಯೆಯ ದಿನ ಶ್ರೀನಿವಾಸನು ದಿಟ್ಟತನದಿಂದ ಆ ಸರೋವರಕ್ಕೆ ಹೋಗಿ, ಅದರಲ್ಲಿ ಕೈ-ಕಾಲು ತೊಳೆದು ಹಿಂತಿರುಗಿದನು.
ನಿನಗೆ ಸ್ವಲ್ಪವೂ ಭಯವಾಗಲಿಲ್ಲವೆ?
ಇಲ್ಲ. ನಾನು ದೇವರ ನಾಮವನ್ನು ಜಪಿಸುತ್ತಿದ್ದೆ. ಹಾಗಿರುವಾಗ ಯಾವ ದುಷ್ಟಶಕ್ತಿ ತಾನೆ ಕೇಡುಂಟುಮಾಡೀತು!
ಅಂತಹ ಎಳೆಯ ವಯಸ್ಸಿನಲ್ಲಿಯೇ ಶ್ರೀನಿವಾಸನಿಗೆ ದೇವರಲ್ಲಿ ಅಚಲವಾದ ಭಕ್ತಿ ಇತ್ತು.
ಅವನ ಬಳಿ ಒಂದು ಪುಟ್ಟ ಸ್ಫಟಿಕದ ಗಣೇಶ ಮೂರ್ತಿ ಇದ್ದಿತು. ಅದಕ್ಕೆ ನಿತ್ಯವೂ ತಪ್ಪದೆ ನಿಷ್ಠೆಯಿಂದ ಸರಳವಾದ ಪೂಜೆಯನ್ನು ಮಾಡುತ್ತಿದ್ದನು.
ಭಗವಂತ! ಇಂದು ನಿನಗೆ ಅರ್ಪಿಸಲು ಈ ನೀರು ಮಾತ್ರ ನನ್ನಲ್ಲಿದೆ.
ಶ್ರೀನಿವಾಸನು ಐಹಿಕ ಪ್ರಪಂಚವನ್ನು ತ್ಯಜಿಸಿ ಸಂನ್ಯಾಸಿಯಾಗಬೇಕೆಂಬ ಇಚ್ಛೆಯನ್ನು ಮಿತ್ರರೊಡನೆ ಪದೇ ಪದೇ ವ್ಯಕ್ತ ಪಡಿಸುತ್ತಿದ್ದನು.
ಏನು ಪ್ರಯೋಜನ? ಅದರ ಬದಲು ಪ್ರಭಾವಿ ಶ್ರೀಮಂತನಾಗಲು ಯಾಕೆ ಪ್ರಯತ್ನಿಸಬಾರದು?
ಸಂಪತ್ತು ಮುಂತಾದವು ನಶ್ವರ. ಸಂನ್ಯಾಸಿಯಾದರೆ ನಾನು ಚಿಂತೆಯಿಲ್ಲದೆ ದೇವರ ಧ್ಯಾನದಲ್ಲಿ ನಿರತನಾಗಿರಬಹುದು, ಭಗವಂತನ ದರ್ಶನವನ್ನು ಪಡೆದು ಸದಾ ಅವನ ರಕ್ಷಣೆಯಲ್ಲಿಯೇ ಇರಬಹುದು.
ಆಗ ಅವನಿಗೆ ಹನ್ನೆರಡೇ ವರ್ಷ ವಯಸ್ಸು.


ಒಂದು ದಿನ, ತಮ್ಮ ಮಗ ಸರಿಯಾಗಿ ಓದುತ್ತಿಲ್ಲವೆಂಬ ತಪ್ಪು ಅಭಿಪ್ರಾಯದಿಂದ ರಾಮ ಶಾಸ್ತ್ರಿಗಳು ಮಗನನ್ನು ಹೊಡೆಯಲು ಕೈ ಎತ್ತಿದ್ದರು. ಅದನ್ನು ತಡೆಯುವಾಗ ಅವರ ಮನೆಯಲ್ಲಿ ಬಾಡಿಗೆಗಿದ್ದ ಒಬ್ಬ ಜ್ಯೋತಿಷಿಗಳು ಶ್ರೀನಿವಾಸನ ಕೈಯನ್ನು ಅಕಸ್ಮಾತ್ತಾಗಿ ಗಮನಿಸಿದರು.




ಜ್ಯೋತಿಷಿಗಳು ಈ ಕುಟುಂಬದವರನ್ನು ಶೃಂಗೇರಿ ಮಠದ ಅಧಿಕಾರಿಯೊಬ್ಬರಿಗೆ ಭೇಟಿ ಮಾಡಿಸಿದರು. ಅವರು ಶ್ರೀನಿವಾಸನ ಉಪನಯನವು ಶೃಂಗೇರಿಯಲ್ಲಿ ನಡೆಯುವಂತೆ ಏರ್ಪಾಟು ಮಾಡಿದರು. ಅದು 1930 ಮೇ ತಿಂಗಳ ಸಮಯ.




ರಾಮ ಶಾಸ್ತ್ರಿಗಳ ಕುಟುಂಬವು ಶೃಂಗೇರಿ ಶಾರದಾಪೀಠದ ಆಗಿನ ಪೀಠಾಧಿಪತಿಗಳಾಗಿದ್ದ ಜಗದ್ಗುರು ಶ್ರೀ ಚಂದ್ರಶೇಖರ ಭಾರತಿ ಮಹಾಸ್ವಾಮಿಗಳ ದರ್ಶನವನ್ನು ಪಡೆದರು.




ಹನ್ನೆರಡು ವರ್ಷದ ಪುಟ್ಟ ಬಾಲಕನ ವಿವೇಕಯುತವಾದ ಉತ್ತರವನ್ನು ಜಗದ್ಗುರುಗಳು ಮೆಚ್ಚಿಕೊಂಡರು.

ಜಗದ್ಗುರುಗಳ ಅನುಮತಿಯನ್ನು ಪಡೆದು, ಶ್ರೀನಿವಾಸನು ಸಂಸ್ಕೃತ ಮತ್ತು ಶಾಸ್ತ್ರಾಭ್ಯಾಸವನ್ನು ಮಾಡಲು ಶೃಂಗೇರಿಯಲ್ಲಿಯೇ ಉಳಿದನು.





ನಿಯಮಬದ್ಧವಾದ ದಿನಚರಿಯನ್ನು ರೂಪಿಸಿಕೊಂಡು, ಶ್ರದ್ಧೆಯಿಂದ ವಿದ್ಯಾಭ್ಯಾಸವನ್ನು ಮಾಡಿದನು.

ಅಪಾರ ಭಕ್ತಿ, ದೃಢ ವೈರಾಗ್ಯ, ಸಂನ್ಯಾಸಾಶ್ರಮ ಸ್ವೀಕರಿಸುವ ಸ್ವಾಭಾವಿಕ ಇಚ್ಛೆ, ಸಹನ ಶಕ್ತಿ, ದಯೆ, ತೀಕ್ಷ್ಣ ಬುದ್ಧಿಮತ್ತೆ ಮುಂತಾದ ಸದ್ಗುಣಗಳಿಂದ ಸಂಪನ್ನನಾಗಿದ್ದ ಶ್ರೀನಿವಾಸನನ್ನೇ ಪೀಠದ ಉತ್ತರಾಧಿಕಾರಿಯಾಗಿ ಜಗದ್ಗುರುಗಳು ನೇಮಿಸಿದ್ದು ಸಹಜವಾಗಿಯೇ ಇತ್ತು.





ಹದಿಮೂರು ವರ್ಷಗಳ ವಟು ಶ್ರೀನಿವಾಸನಿಗೆ 1931 ಮೇ 22ರಂದು ಪರಮಹಂಸಸಂನ್ಯಾಸ ದೀಕ್ಷೆಯನ್ನು ನೀಡಲಾಯಿತು. ಬಾಲ ಸಂನ್ಯಾಸಿಗೆ ಅವರ ಗುರುಗಳು ಹೊಸ ಹೆಸರನ್ನು ಪ್ರದಾನ ಮಾಡಿದರು. ಅಂದಿನಿಂದ ಪೂಜ್ಯರು ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥರು ಎಂಬ ಅಭಿಧಾನವನ್ನು ಹೊಂದಿದರು.



ಪೂಜ್ಯರು ಕಠಿಣ ತಪಸ್ಸನ್ನು ಕೈಗೊಂಡರು. ಇತರರು ಶೃಂಗೇರಿಯ ತೀವ್ರ ಛಳಿಯಿಂದ ನಡುಗುತ್ತಿದ್ದರೆ, ರಾತ್ರಿಯ ವೇಳೆಯಲ್ಲಿ ಅವರು ಒದ್ದೆಬಟ್ಟೆಯನ್ನುಟ್ಟು ಬರಿಯ ನೆಲದ ಮೇಲೆಯೇ ಮಲಗುತ್ತಿದ್ದರು.
ಯಾವ ಆಹಾರದ ಸ್ವಾದವೂ ಅರಿವಾಗಬಾರದೆಂದು ಬಡಿಸಿದ ಆಹಾರವೆಲ್ಲವನ್ನೂ ಒಟ್ಟಿಗೆ ಒಂದೇ ಮಿಶ್ರಣವನ್ನಾಗಿಸಿ ಸ್ವೀಕರಿಸುತ್ತಿದ್ದರು.
ಒಂದು ರಾತ್ರಿ, ಕೆಂಪಿರುವೆಯ ಗುಂಪು ಅವರ ಕೋಣೆಯೊಳಗೆ ದಾಳಿ ಮಾಡಿ ಅವರ ಬೆನ್ನನ್ನು ಕಚ್ಚಿ ಘಾಸಿಗೊಳಿಸಿದವು. ಪೂಜ್ಯರು ಅದರ ಬಗ್ಗೆ ಯಾರೊಡನೆಯೂ ಚಕಾರವೆತ್ತಿರಲಿಲ್ಲ.
ಅವರು ಯಾವುದರ ಬಗ್ಗೆಯೂ ಆಕ್ಷೇಪಣೆಯಾಗಲಿ ಅಥವಾ ಬೇಸರಿಸಿಕೊಳ್ಳುವುದಾಗಲಿ ಮಾಡುತ್ತಿರಲಿಲ್ಲ. ಸದಾ ಪ್ರಸನ್ನಚಿತ್ತರಾಗಿರುತ್ತಿದ್ದರು.
ಅವರಿಗೆ ಚಿಕ್ಕ ವಯಸ್ಸಿನಿಂದಲೇ ಪ್ರಕೃತಿಯ ಮೇಲೆ ಅಪಾರ ಪ್ರೇಮವಿತ್ತು.
ಭಗವಂತನ ಸೃಷ್ಟಿ ಎಷ್ಟು ಅದ್ಭುತ! ಸೂರ್ಯನ ಕಿರಣಗಳು ನದಿಯ ಅಲೆಗಳೊಡನೆ ಆಟವಾಡುವುದು, ಹಸಿರು ಗದ್ದೆಗಳು, ಕೋತಿಗಳ ತುಂಟಾಟ, ಗೋವುಗಳ ಪ್ರೇಮ, ಮುಂತಾದವೆಲ್ಲಾ ಎಷ್ಟು ಮನೋಹರ. ಬಹಳ ಜನ ಬೇಸರಿಸುವ ಕೀಟಗಳೂ ನಮಗೆಷ್ಟು ಕಲಿಸಿಕೊಡುತ್ತವೆ. ಪ್ರಕೃತಿಯ ಈ ಸುಂದರ ಪ್ರದರ್ಶನ ಎಲ್ಲರಿಗೂ ಮುಕ್ತವಾಗಿ ಅನುಭವಿಸಲು ಲಭ್ಯವಾಗಿದೆ.
ಒಮ್ಮೆ ಒಂದು ಕಣಜವು ಮಣ್ಣಿನ ಗೂಡಿನಲ್ಲಿ ನಿಶ್ಚೇಷ್ಟಿತವಾದ ಮಿಡತೆಯನ್ನು ಒಳಗಿರಿಸಿ, ಸಣ್ಣ ತೂತನ್ನು ಬಿಟ್ಟು ಗೂಡನ್ನು ಮುಚ್ಚುತ್ತಿದ್ದುದನ್ನು ನೋಡಿದರು.
ಒಳಗೆ ಕಣಜದ ಮರಿಗಳು ಇರಬೇಕು.
ಗೂಡಿನಲ್ಲಿ ವಾಸಿಸುತ್ತಿದ್ದ ಜೀವಿಗಳನ್ನು ನೋಡಬಯಸಿದರು ಆದರೆ ಅವರೊಡನೆ ಭೂತಗನ್ನಡಿ ಇರಲಿಲ್ಲ.
ಪೂಜ್ಯರು ಕೂಡಲೆ ಅಲ್ಲಿಯೇ ಒಂದು ಭೂತಗನ್ನಡಿಯನ್ನು ನಿರ್ಮಿಸಿ ಕೊಂಡರು. ಎಲೆಯಲ್ಲಿ ತೂತು ಮಾಡಿ ಮಳೆಹನಿಯೊಂದನ್ನು ಒಳಗಿರಿಸಿ...
...ಗೂಡಿನೊಳಗಿದ್ದ ಜೀವಿಗಳನ್ನು ಪರಿಶೀಲನೆ ಮಾಡಲು ಅದನ್ನು ಬಳಸಿದರು.
ಇಂತಹ ಆಸಕ್ತಿ ಮತ್ತು ಕೌಶಲ್ಯ ಅವರಿಗೆ ಸಾಮಾನ್ಯವಾಗಿತ್ತು.


ಸಂನ್ಯಾಸ ಸ್ವೀಕರಿಸಿದ ದಿನದಿಂದ ಏಳು ರಾತ್ರಿಗಳು, ಪೂಜ್ಯರು ಸ್ವಪ್ನಗಳ ಸರಣಿಯಲ್ಲಿ ಈಶ್ವರನನ್ನು ಕಂಡರು.
ಆ ಕನಸುಗಳಲ್ಲಿ ಶಿವನು ಅವರಿಗೆ ನಾನಾ ವಿಧವಾದ ಆಸನ, ಪ್ರಾಣಾಯಾಮ ಹಾಗೂ ಯೋಗ-ಕ್ರಿಯೆಗಳನ್ನು ಪ್ರದರ್ಶಿಸಿ, ಯೋಗದ ಬಗ್ಗೆ ಬೋಧಿಸಿದನು.
ಜನ್ಮಜಾತವಾಗಿ ಬಂದಿದ್ದ ಸಾಮರ್ಥ್ಯ ಹಾಗೂ ಶ್ರದ್ಧಾಪೂರ್ವಕ ಅಭ್ಯಾಸದ ಮೂಲಕ, ಅತಿ ಶೀಘ್ರದಲ್ಲಿ ಈ ಯೋಗ ವಿಧಿಗಳಲ್ಲಿ ಅವರು ಪರಿಣಿತಿ ಹೊಂದಿದರು.
ಕೆಲವು ವಾರಗಳ ನಂತರ, ಹಿರಿಯ ಜಗದ್ಗುರುಗಳು ಪೂಜ್ಯರಿಗೆ ನರಸಿಂಹ ಮಂತ್ರದ ಉಪದೇಶ ಕೊಡಲು ಪ್ರಾರಂಭಿಸಿದಾಗ, ಪೂಜ್ಯರು ನರಸಿಂಹನನ್ನು ಸ್ಪಷ್ಟವಾಗಿ ತಮ್ಮ ಹೃದಯ ಕಮಲದಲ್ಲಿ ಕಲ್ಪಿಸಿ, ಮಾನಸಿಕವಾಗಿ ದೀರ್ಘ ಪೂಜೆಯನ್ನು ಸಲ್ಲಿಸಿದರು.
ಅವರು ಮಂತ್ರವನ್ನು ಉಚ್ಚರಿಸುತ್ತಿದ್ದಂತೆಯೇ ನರಸಿಂಹನು ಅವರ ಹೃದಯದಲ್ಲಿ ಸ್ಪಷ್ಟವಾಗಿ ಗೋಚರವಾದನು.
ಈ ಅನುಭವದ ನಂತರ, ಪೂಜ್ಯರು ತಮ್ಮ ಎಲ್ಲಾ ಆಲೋಚನೆಗಳನ್ನು, ಮಾತುಗಳನ್ನು ಹಾಗೂ ಕೃತಿಗಳನ್ನು ನರಸಿಂಹನಿಗೇ ಸಮರ್ಪಿಸಲು ಪ್ರಾರಂಭಿಸಿದರು.
ಅವರು ಸ್ನಾನ ಮಾಡಿದಾಗ, ನರಸಿಂಹನಿಗೆ ಅಭಿಷೇಕವನ್ನು ಮಾಡಿದಂತೆ ಭಾವಿಸುತ್ತಿದ್ದರು...
ಅವರು ಆಹಾರ ಸ್ವೀಕರಿಸಿದಾಗ, ನರಸಿಂಹನಿಗೇ ತಿನ್ನಿಸುತ್ತಿದ್ದಂತೆ ಭಾವಿಸುತ್ತಿದ್ದರು...
ಓದುತ್ತಿದ್ದಾಗ, ಅವರೊಳಗಿರುವ ನರಸಿಂಹನು ಕೇಳಿಸಿ ಕೋಳ್ಳುತ್ತಿದ್ದಾನೆ ಎಂದು ಭಾವಿಸುತ್ತಿದ್ದರು...
ನಡೆದಾಗ, ತಮ್ಮೊಳಗಿರುವ ನರಸಿಂಹನನ್ನು ವಿಹಾರಕ್ಕೆ ಕರೆದೊಯ್ಯುತ್ತಿರುವಂತೆ ಅವರಿಗೆ ಭಾಸವಾಗುತ್ತಿತ್ತು...
ಈ ಕರ್ಮಯೋಗವು ಅವರಿಗೆ ಕೆಲವೇ ಮಾಸಗಳಲ್ಲಿ ಸಹಜವಾಗಿಬಿಟ್ಟಿತು.

ಪೂಜ್ಯರಿಗೆ ಹದಿನಾರು ವರ್ಷಗಳಾದಾಗ, ಹಿರಿಯ ಜಗದ್ಗುರುಗಳು ದೇವರ ಮೂರ್ತಿಗಳ ಮೇಲೆ ದೀರ್ಘವಾದ ಧ್ಯಾನ ಮಾಡುವುದನ್ನು ಉಪದೇಶಿಸಿದರು.



ಧ್ಯಾನ ಮಾಡುವ ಮೊದಲನೆಯ ಪ್ರಯತ್ನದಿಂದಲೇ ಪೂಜ್ಯರ ಮನಸ್ಸು ಏಕಾಗ್ರಚಿತ್ತತೆಯಿಂದಿತ್ತು. ಪ್ರತಿ ಬಾರಿಯೂ ಸ್ವತಃ ತಮ್ಮ ಮೇಲಿನ, ಸುತ್ತಮುತ್ತಲಿನ ಹಾಗೂ ಸಮಯದ ಅರಿವನ್ನು ಕಳೆದುಕೊಳ್ಳುತ್ತಿದ್ದರು.



ಅವರು ಭಗವಂತನ ನಾನಾ ರೂಪಗಳನ್ನು ಕುರಿತು ಸುಲಭವಾಗಿ ಧ್ಯಾನ ಮಾಡಬಲ್ಲವರಾಗಿದ್ದರು.



ಧ್ಯಾನದ ತಾಂತ್ರಿಕತೆಯ ಬಗ್ಗೆ ಪ್ರಯೋಗಗಳನ್ನು ಮಾಡಿ ಅವುಗಳಲ್ಲಿ ನಿಷ್ಣಾತರಾದರು.




ಅವರು ದೇವರ ಮೂರ್ತಿಯ ಪ್ರಕಾಶವನ್ನು, ಹಿನ್ನೆಲೆಯ ಬಣ್ಣ ಹಾಗೂ ಬೆಳಕಿನ ಪ್ರಮಾಣವನ್ನು ಬದಲಾಯಿಸಬಲ್ಲವರಾಗಿದ್ದರು.


ಸಾಮಾನ್ಯವಾಗಿ ಯಾವುದೇ ವಸ್ತುವಿನ ಒಂದು ಭಾಗದ ಮೇಲೆ ಗಮನ ಕೇಂದ್ರಿತವಾದಾಗ, ಉಳಿದ ಭಾಗವು ಅಸ್ಪಷ್ಟವಾಗುತ್ತದೆ. ಆದರೆ ಪೂಜ್ಯರು ಸಂಪೂರ್ಣ ರೂಪವನ್ನು ಸಮವಾದ ಸ್ಪಷ್ಟತೆಯಿಂದ ಕಾಣಲು ಸಮರ್ಥರಾಗಿದ್ದರು.




ಭಗವಂತನ ಪಾದಗಳು ಮುಂತಾದ ಒಂದೊಂದೇ ಭಾಗದ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಬಲ್ಲವರಾಗಿದ್ದರು. ಆಗಲೂ ಆ ಭಾಗವು ಯಾವ ದಿವ್ಯ ಮೂರ್ತಿಯದು ಎಂಬುದನ್ನು ಮರೆಯುತ್ತಿರಲಿಲ್ಲ.



ಅವರು ಮಂತ್ರವನ್ನು ಜಪಿಸಲು ಇಚ್ಛಿಸಿದರೆ, ಅದು ಪೂರೈಸುವವರೆಗೂ ಸೂಕ್ತವಾದ ಮಟ್ಟಕ್ಕೆ ಏಕಾಗ್ರತೆಯ ಪ್ರಮಾಣವನ್ನಿಳಿಸಿಕೊಳ್ಳಲು ಸಮರ್ಥರಾಗಿದ್ದರು.





ಪೂಜ್ಯರು ನಿತ್ಯ ಮೂರುಬಾರಿ ಧ್ಯಾನಾಭ್ಯಾಸದಲ್ಲಿ ತೊಡಗುತ್ತಿದ್ದರು. ಪಕ್ಕದಲ್ಲಿದ್ದ ಗುಡ್ಡದ ಮೇಲಿನ ಕಾಲಭೈರವ ದೇವಸ್ಥಾನದಲ್ಲಿ ಸಂಜೆಯ ಹೊತ್ತು ಧ್ಯಾನಮಾಡುತ್ತಿದ್ದರು. ಸುಮಾರು ಒಂದು ವರ್ಷ ಹೀಗೆಯೇ ಕಳೆಯಿತು.



ಒಂದು ಸಂಜೆ ಬಾಲಾಂಬೆಯ ಸ್ವರೂಪವನ್ನು ಕುರಿತು ಚಿತ್ತವನ್ನು ಕೇಂದ್ರೀಕರಿಸಲು ಪ್ರಾರಂಭಿಸಿದರು.

ಇದ್ದಕ್ಕಿದ್ದಂತೆಯೇ ಅವರ ಮನಸ್ಸು ಅಮ್ಮನವರ ಪಾದಗಳಲ್ಲಿ ಲೀನವಾಯಿತು. ಅಮ್ಮನವರ ಪಾದಗಳು ಜೀವಂತವಾಗಿರುವಂತೆ ಅಸಾಧಾರಣ ಅನುಭೂತಿಯುಂಟಾಯಿತು! ಅವರು ಕೇವಲ ಕಲ್ಪಿತರೂಪವನ್ನಲ್ಲದೆ ಸಾಕ್ಷಾತ್ ದೇವಿಯನ್ನೇ ಕಂಡರು!



ಇದು ಅವರ ಸವಿಕಲ್ಪ-ಸಮಾಧಿಯ* ಪ್ರಥಮ ಅನುಭವವಾಗಿತ್ತು.

ಒಂದೂವರೆ ಘಂಟೆಯ ನಂತರ ಆ ಸ್ಥಿತಿಯಿಂದ ಹೊರಬಂದು ಕಣ್ತೆರೆದಾಗ ದೇವಾಲಯದೊಳಗೆ ತಮ್ಮೆದುರು ಬಾಲಾಂಬೆಯನ್ನೇ ಪ್ರತ್ಯಕ್ಷವಾಗಿ ಕಂಡರು!



ಕೈಗಳನ್ನು ಚಾಚಿ ಅಮ್ಮನವರ ಪಾದಸ್ಪರ್ಶ ಮಾಡಿದರು.




ಈ ಅನುಭವದ ನಂತರ ಯಾವ ದಿವ್ಯ ಮೂರ್ತಿಯನ್ನು ಕುರಿತು ಅವರು ಧ್ಯಾನ ಮಾಡಿದರೂ ಸುಲಭವಾಗಿ ಸವಿಕಲ್ಪ ಸಮಾಧಿಯನ್ನು ಹೊಂದುತ್ತಿದ್ದರು.

ಕೆಲವು ತಿಂಗಳ ನಂತರ ಕುಂಡಲಿನಿ ಯೋಗದ# ಅನುಭವ ಅವರಿಗಾಯಿತು.



ಸವಿಕಲ್ಪ ಸಮಾಧಿಯಲ್ಲಿ ಮುಳುಗಿದರು.

ಒಂದು ಸಂಜೆ ಪೂಜ್ಯರು ಶಿವನು ತಮ್ಮ ಹೃತ್ಕಮಲದಲ್ಲಿ ನೆಲೆಸಿರುವಂತೆ ಧ್ಯಾನ ಮಾಡಿದಾಗ ಒಂದೂವರೆ ಘಂಟೆಗಳ ಕಾಲ ಸಮಾಧಿ-ಸ್ಥಿತಿಯಲ್ಲಿಯೇ ಇದ್ದರು.




ಕಣ್ಣನ್ನು ತೆರೆದಾಗ ಅವರೊಳಗಿನಿಂದ ಭಗವಂತನು ಹೊರಬಂದು ಬೃಹದ್ರೂಪ ತಾಳಿದನು. ಆಗ ಪೂಜ್ಯರು ಶಿವನನ್ನು ತಮ್ಮ ಎದುರಿಗೇ ಪ್ರತ್ಯಕ್ಷವಾಗಿ ಕಂಡರು!



*ಧ್ಯಾನವಸ್ತುವಿನಲ್ಲಿ ಲೀನವಾಗುವ ಅವಸ್ಥೆ, ಇದು ಯೋಗದ ಅತ್ಯುನ್ನತ ಮಟ್ಟದ ಹಿಂದಿನ ಸೋಪಾನ


#ಕುಂಡಲಿನಿ ಶಕ್ತಿಯು ಆರು ಯೋಗ ಚಕ್ರಗಳ ಮೂಲಕ ಮೇಲಕ್ಕೆ ಏರಿ ನೆತ್ತಿಯಲ್ಲಿರುವ ಏಳನೆಯ ಚಕ್ರವನ್ನು ತಲುಪುತ್ತದೆ.




*ನಿರ್ವಿಕಲ್ಪ ಸಮಾಧಿ ಎಂದರೆ ಯಾವ ಭೇದವೂ ಇಲ್ಲದೆ ಪರಮಸತ್ಯ ಒಂದೇ ಪ್ರಕಾಶವಾಗುವ ಸ್ಥಿತಿ


#ಜೀವವಿದ್ದಾಗಲೇ ಪರಬ್ರಹ್ಮನಲ್ಲಿ ಲೀನರಾಗಿ ಮುಕ್ತಿಯನ್ನು ಹೊಂದಿದ್ದರು.

ಪೂಜ್ಯರು ಪ್ರಾಪಂಚಿಕ ಕರ್ತವ್ಯಗಳಿಂದ ಅತೀತರಾಗಿದ್ದರೂ, ತಮ್ಮ ಎಲ್ಲಾ ಜವಾಬ್ದಾರಿಗಳನ್ನು ಲೋಕ ಕಲ್ಯಾಣಕ್ಕಾಗಿ ಪರಿಪೂರ್ಣತೆಯಿಂದ ನಿರ್ವಹಿಸಿದರು.




ಮೊದಲನೆಯದಾಗಿ, ಅವರು ಶ್ರದ್ಧೆಯಿಂದ ಶಾಸ್ತ್ರಾಭ್ಯಾಸವನ್ನು ಮಾಡಿದರು, ವಿಶೇಷವಾಗಿ ವೇದಾಂತ, ತರ್ಕ ಮತ್ತು ಯೋಗಶಾಸ್ತ್ರಗಳಲ್ಲಿ ಪಾರಂಗತರಾದರು.

ಅತ್ಯಂತ ಭಕ್ತಿಯಿಂದ ತಮ್ಮ ಗುರುಗಳ ಸೇವೆ ಮಾಡಿದರು. ತಮ್ಮ ಗುರುಗಳಿಗೆ ಅನಾರೋಗ್ಯವಾಗಿದ್ದಾಗ ತಾವೇ ಆರೈಕೆಯನ್ನು ಮಾಡಿದರು.




ಇದಕ್ಕೆ ಪೂರಕವಾಗಿ ಹಿರಿಯ ಜಗದ್ಗುರುಗಳಿಗೆ ತಮ್ಮ ಶಿಷ್ಯರ ಮೇಲೆ ಸ್ತುತಿಗಳನ್ನೇ ರಚಿಸುವಷ್ಟು ವಿಶ್ವಾಸ ಮತ್ತು ಆದರವಿತ್ತು.

ಭಾರತದ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಶೃಂಗೇರಿಗೆ ಆಗಮಿಸಿ ಶಾರದಾಂಬೆಯ ಆಲಯದಲ್ಲಿ ಇಬ್ಬರು ಜಗದ್ಗುರುಗಳ ದರ್ಶನವನ್ನು ಪಡೆದರು.



ರಾಷ್ಟ್ರಾಧ್ಯಕ್ಷರು ಪೂಜ್ಯರನ್ನು ಬಹಳವಾಗಿ ಮೆಚ್ಚಿಕೊಂಡರು.


ಸೆಪ್ಟೆಂಬರ್ 1954ರಂದು, ಹಿರಿಯ ಜಗದ್ಗುರುಗಳು ತಮ್ಮ ಐಹಿಕ ಶರೀರವನ್ನು ತ್ಯಜಿಸಿದರು. ಪೂಜ್ಯರು ಶೃಂಗೇರಿ ಶಾರದಾಪೀಠದ ಮೂವತ್ತೈದನೆಯ ಪೀಠಾಧೀಶ್ವರರಾಗಿ ಜವಾಬ್ದಾರಿಯನ್ನು ವಹಿಸಿಕೊಂಡರು.



ಪೂಜ್ಯರು ದೇಶಾದ್ಯಂತ ಜನರ ಹಾಗೂ ಸಮಾಜದ ಕಲ್ಯಾಣಕ್ಕಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಯೋಜನೆಗಳನ್ನು ಕೈಗೊಂಡು, ಕ್ರಮವಾಗಿ ಕಾರ್ಯಗತಗೊಳಿಸಿದರು.



ಪರಿಸರ ಸಂರಕ್ಷಣೆಯಲ್ಲಿ ಅತೀವ ವಿಶ್ವಾಸಹೊಂದಿದ್ದು, ಶೃಂಗೇರಿಯ ಸುತ್ತಮುತ್ತ ಇರುವ ಹಲವಾರು ಗುಡ್ಡಗಳ ಮೇಲೆ ಮರಗಳನ್ನು ಬೆಳೆಸಿದರು, ಇದರಿಂದ ಪಶ್ಚಿಮಘಟ್ಟಗಳ ಆ ಭಾಗದ ಜೀವ ವೈವಿಧ್ಯತೆಯನ್ನು ಶ್ರೀಮಂತಗೊಳಿಸಿದರು.




ಭಾರತದಾದ್ಯಂತ ಹಲವಾರು ದೇವಾಲಯಗಳನ್ನು ಪ್ರತಿಷ್ಠಾಪಿಸಿ, ಸಣ್ಣ ಸಣ್ಣ ಹಳ್ಳಿಯಲ್ಲಿಯೂ ಪೂಜೆಗಳು ಪುನರಾರಂಭವಾಗುವಂತೆ ಮಾಡಿದರು.




ಯಾತ್ರಿಕರ ಅನುಕೂಲಕ್ಕಾಗಿ ಹೊಸ ವಸತಿಗೃಹಗಳನ್ನು ಕಟ್ಟಿಸಿದರು, ಹಾಗೆಯೇ ದೇಶಾದ್ಯಂತ ಕಲ್ಯಾಣಮಂಟಪಗಳು ಮತ್ತು ಧರ್ಮಶಾಲೆಗಳನ್ನು ನಿರ್ಮಿಸಿದರು.




ಪೂಜ್ಯರ ಪರಿಶ್ರಮದಿಂದಲೇ ಶೃಂಗೇರಿಯಲ್ಲಿ ಮೊಟ್ಟ ಮೊದಲ ತೆಂಗಿನ ತೋಪುಗಳು ಬೆಳೆದವು. ವ್ಯವಸಾಯದಲ್ಲಿ ಹಲವಾರು ಹೊಸ ಆವಿಷ್ಕಾರಗಳನ್ನು ತಂದರು.



ವೇದಾಧ್ಯಯನವನ್ನು ಮುಂದುವರೆಸಲು ಹಲವಾರು ಸ್ಥಳಗಳಲ್ಲಿ ಪಾಠಶಾಲೆಗಳನ್ನು ಪ್ರಾರಂಭಿಸಿದರು. ವಿದ್ಯಾರ್ಥಿಗಳ ವಿದ್ಯಾಭ್ಯಾಸ ಹಾಗೂ ಯೋಗಕ್ಷೇಮಗಳ ಬಗ್ಗೆ ಸ್ವತಃ ಕಾಳಜಿಯನ್ನು ವಹಿಸುತ್ತಿದ್ದರು.





ಪೂಜ್ಯರು ಶೃಂಗೇರಿಯಲ್ಲಿ ಬಾಲಕಿಯರಿಗಾಗಿ ಮೊಟ್ಟಮೊದಲನೆಯ ಶಾಲೆಯನ್ನು ಆರಂಭಿಸಿದರು, ಬೆಂಗಳೂರಿನಲ್ಲಿ ಜ್ಞಾನೋದಯ ಶಾಲೆಯನ್ನು ಸ್ಥಾಪಿಸಿದರು ಮತ್ತು ಕಾಲಡಿಯಲ್ಲಿ ಶ್ರೀ ಶಂಕರ ಕಾಲೇಜಿಗೆ ಪೋಷಕರಾದರು. ಗ್ರಂಥಾಲಯಗಳನ್ನು ಮತ್ತು ಸಂಶೋಧನಾ ಕೇಂದ್ರಗಳನ್ನೂ ತೆರೆದರು.


ಶೃಂಗೇರಿಯ ಹಾಗೂ ಸುತ್ತ ಮುತ್ತಲ ಹಳ್ಳಿಯಲ್ಲಿರುವ ಜನರಿಗೆ ಯಾವುದೇ ರೀತಿಯ ವೈದ್ಯಕೀಯ ಸೌಲಭ್ಯವೂ ಇರಲಿಲ್ಲ. ಸುಮಾರು 1980ರ ಸಮಯದಲ್ಲಿ ನಾನಾ ವೈದ್ಯಕೀಯ ವಿಶೇಷತೆಗಳುಳ್ಳ ಶಾರದಾ ಧನ್ವಂತರಿ ಧರ್ಮದ ಆಸ್ಪತ್ರೆಯನ್ನು ಶೃಂಗೇರಿಯಲ್ಲಿ ಸ್ಥಾಪಿಸಿ ಆ ಕೊರತೆಯನ್ನು ತುಂಬಿದರು.



ಆಗ ಶೃಂಗೇರಿಯು ನಗರಪ್ರದೇಶವಾಗಿರದಿದ್ದರೂ ಅಲ್ಲಿಯ ಆಸ್ಪತ್ರೆಗಾಗಿ ಪೂಜ್ಯರು ಅತ್ಯಾಧುನಿಕ ವೈದ್ಯಕೀಯ ಹಾಗೂ ಅದರ ಸಂಶೋಧನಕ್ಕೆ ಬೇಕಾಗುವ ಉಪಕರಣಗಳನ್ನು ದೊರಕಿಸಿ ನಾನಾ ವಿಭಾಗಗಳನ್ನು ನೋಡಿಕೊಳ್ಳುವುದಕ್ಕಾಗಿ ಅತ್ಯಂತ ನಿಪುಣ ವೈದ್ಯರನ್ನು ನೇಮಿಸಿದರು.



ಅವರಿಗೆ ಅಲ್ಪ ಪ್ರಮಾಣದಲ್ಲಿಯೂ ಪೋಲಾಗುವಿಕೆಯನ್ನು ಸಹಿಸಲು ಆಗುತ್ತಿರಲಿಲ್ಲ. ಒಮ್ಮೆ ಒಂದು ಕಡೆ, ಮೇಲಿದ್ದ ನೀರಿನ ತೊಟ್ಟಿಯಿಂದ ಆಗಾಗ ನೀರು ತುಂಬಿ ಹರಿಯುತ್ತಿದ್ದುದನ್ನು ಗಮನಿಸಿದರು.




ಕ್ಷಿಪ್ರದಲ್ಲಿಯೇ ಆ ಜಾಗದಲ್ಲಿ ಒಂದು ತೆಂಗಿನ ಸಸಿಯನ್ನು ನೆಡುವ ಮೂಲಕ, ತುಂಬಿ ಹೆಚ್ಚಾದ ನೀರು ಸದುಪಯೋಗವಾಗುವಂತೆ ನೋಡಿಕೊಂಡರು!



ಮೂರು ದಶಕಗಳಲ್ಲಿ ಪೂಜ್ಯರು ಮೂರು ಬಾರಿ ದೇಶಾದ್ಯಂತ ಸಂಚಾರ ಮಾಡಿದರು. ಹಳ್ಳಿಯಿಂದ ಹಳ್ಳಿಗೆ ಹೋಗಿ ಹಲವಾರು ರೀತಿಗಳಲ್ಲಿ ಲಕ್ಷಾಂತರ ಜನರ ಹೃದಯವನ್ನು ಮುಟ್ಟಿದರು.



ಕೆಲವು ಸ್ಥಳಗಳಲ್ಲಿ ಪೂಜ್ಯರಿಗೆ ಅರಮನೆಗಳಲ್ಲಿ ತಂಗುವ ವ್ಯವಸ್ಥೆ ಮಾಡುತ್ತಿದ್ದರು...




...ಬೇರೆ ಕೆಲವು ಕಡೆಗಳಲ್ಲಿ ಆತಿಥೇಯರು ಕನಿಷ್ಠ ಸೌಲಭ್ಯಗಳನ್ನು ದೊರಕಿಸುವುದಕ್ಕೆ ಮಾತ್ರ ಶಕ್ತರಾಗಿರುತ್ತಿದ್ದರು. ಇಂತಹ ಅಂಶಗಳು ಪೂಜ್ಯರ ಗಣನೆಗೆ ಬರುತ್ತಿರಲಿಲ್ಲ.




ನೂರು ವರ್ಷಗಳ ಮೇಲೆ ಚೆನ್ನೈ ಹಾಗೂ ಹೈದರಾಬಾದ್ ಊರುಗಳನ್ನು ಅನುಗ್ರಹಿಸಿದ ಶೃಂಗೇರಿ ಜಗದ್ಗುರುಗಳಲ್ಲಿ ಪೂಜ್ಯರು ಮೊದಲಿಗರು, ಹಾಗೆಯೇ ಮುಂಬೈ, ದಿಲ್ಲಿ ಹಾಗೂ ಕೋಲ್ಕತ್ತ ಊರುಗಳಿಗೆ ಭೇಟಿ ನೀಡಿದವರಲ್ಲಿ ಮೊಟ್ಟಮೊದಲನೆಯವರು.



ಆದಿಶಂಕರ ಭಗವತ್ಪಾದರ ನಂತರ ನೇಪಾಳಕ್ಕೆ ಭೇಟಿ ನೀಡಿದ ಶಂಕರಾಚಾರ್ಯರ ಪೈಕಿ ಪೂಜ್ಯರೇ ಪ್ರಪ್ರಥಮರು. 1967ರ ಈ ಯಾತ್ರೆಯ ಸಂದರ್ಭದಲ್ಲಿ ಪೂಜ್ಯರನ್ನು ಅತ್ಯಂತ ಗೌರವ ಮತ್ತು ವಿಶ್ವಾಸದಿಂದ ಬರಮಾಡಿಕೊಂಡರು.




ಪೂಜ್ಯರ ಈ ಐತಿಹಾಸಿಕ ಆಗಮನವನ್ನು ಚಿರಸ್ಮರಣೀಯವಾಗಿರಿಸಲು ನೇಪಾಳದ ಸರ್ಕಾರ ಅಪರೂಪದ ಗೌರವದ ಗುರುತಾಗಿ ಪಶುಪತಿನಾಥ ದೇವಾಲಯದ ಆವರಣದಲ್ಲಿಯೇ ಬೃಹತ್ ಫಲಕವನ್ನು ಕೆತ್ತಿಸಿದರು.

ಮೊದಲ ಬಾರಿ 1967ರಲ್ಲಿ ವಾರಣಾಸಿಗೆ ಭೇಟಿ ನೀಡಿದಾಗ, ನಾಡಿನಲ್ಲೇ ಅತ್ಯಂತ ಪಾಂಡಿತ್ಯ ಪಡೆದ ವಿದ್ವಾಂಸರು ಎಂಬ ಖ್ಯಾತಿ ಹೊಂದಿದ್ದ ಶ್ರೋತೃವರ್ಗಕ್ಕೆ ಪೂಜ್ಯರು ಶಾಸ್ತ್ರಗಳ ಬಗ್ಗೆ ಉಪನ್ಯಾಸ ನೀಡಿದರು. ಅಲ್ಲಿಗೆ ಬಂದಾಗ ತಮಗೆ ಪೂಜ್ಯರು ಅಪರಿಚಿತರಾಗಿದ್ದರೂ ಪೂಜ್ಯರ ಶಾಸ್ತ್ರಗಳ ಬಗೆಗಿನ ಆಳವಾದ ಪಾಂಡಿತ್ಯ ಹಾಗೂ ಅನುಪಮ ಪ್ರತಿಭೆಯನ್ನು ಕಂಡ ಅಲ್ಲಿಯ ವಿದ್ವಾಂಸರು ಮಂತ್ರಮುಗ್ಧರಾಗಿದ್ದರು.




ಅಮೇರಿಕದ ರಾಯಭಾರಿಯಾಗಿದ್ದ ಶ್ರೀ ಎಲ್ಸ್ ವರ್ಥ್ ಬಂಕರ್ ಅವರು ಪೂಜ್ಯರನ್ನು 1960ರಲ್ಲಿ ಭೇಟಿ ಮಾಡಿದರು. ಆಧುನಿಕಯುಗದ ಸಮಸ್ಯೆಗಳ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಿದರು.




ಶ್ರೀ ಬಂಕರ್ ಅವರು ಅನುಗ್ರಹೀತರಾಗಿ ಹಾಗೂ ಇಂದಿನ ಸಮಸ್ಯೆಯ ಮೂಲಕ್ಕೇ ತಟ್ಟುವಂತಹ ಪೂಜ್ಯರ ಕಾರ್ಯಸಾಧ್ಯವಾದ ಪರಿಹಾರದ ಬಗ್ಗೆ ಅತ್ಯಂತ ಪ್ರಭಾವಿತರಾಗಿ ಹಿಂತಿರುಗಿದರು.

ಪೂಜ್ಯರು ಆದಿಶಂಕರಾಚಾರ್ಯರ ನಂತರ ಪ್ರಥಮ ಬಾರಿ ನಾಲಕ್ಕೂ ಆಮ್ನಾಯಪೀಠದ* ಜಗದ್ಗುರುಗಳ ಐತಿಹಾಸಿಕ ಸಮ್ಮೇಳನವನ್ನು ಆಯೋಜಿಸಿದರು. ಜಗದ್ಗುರುಗಳೆಲ್ಲರೂ ವಿಶ್ವಶಾಂತಿಗಾಗಿ ಒಮ್ಮತದ ಸಂದೇಶವನ್ನು ಬಿಡುಗಡೆ ಮಾಡಿದರು.



*ಆದಿ ಶಂಕರಾಚಾರ್ಯ ಭಗವತ್ಪಾದರು ಭಾರತ ದೇಶದ ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದ ನಾಲ್ಕು ಮಠಗಳು.

ಸರ್ಕಾರದ ಮುಖ್ಯಸ್ಥರು, ಮಂತ್ರಿಗಳು, ರಾಜರುಗಳು ಮತ್ತು ಇತರ ಮಹನೀಯರು ಪೂಜ್ಯರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು ಹಾಗೂ ನಾನಾ ಸಂದರ್ಭಗಳಲ್ಲಿ ಪೂಜ್ಯರ ಆಶೀರ್ವಾದವನ್ನು ಕೋರುತ್ತಿದ್ದರು.




ಜನರ ಆರ್ಥಿಕ ಸ್ಥಿತಿ, ಜಾತಿ, ಮತ ಮತ್ತು ಧರ್ಮ ಮುಂತಾದವುಗಳನ್ನು ಪೂಜ್ಯರು ಪರಿಗಣಿಸುತ್ತಿರಲಿಲ್ಲ. ಎಲ್ಲಿ ಹೋದರೂ ಅಲ್ಲಿ ಜನರು ಬಹುಸಂಖ್ಯೆಯಲ್ಲಿ ಬಂದು ತಮ್ಮ ಸಮಸ್ಯೆಗಳಿಗೆ ಅವರ ಸಲಹೆ ಮತ್ತು ಆಶೀರ್ವಾದಗಳನ್ನು ಬೇಡುತ್ತಿದ್ದರು. ತಮ್ಮ ಸಂತೋಷವನ್ನು ಪೂಜ್ಯರೊಡನೆ ಹಂಚಿಕೊಳ್ಳುತ್ತಿದ್ದರು.



ಒಮ್ಮೆ ಸಂತಾನಕ್ಕಾಗಿ ಹಂಬಲಿಸುತ್ತಿದ್ದ ಮುಸಲ್ಮಾನ ಸಜ್ಜನರೊಬ್ಬರು ಪೂಜ್ಯರ ಆಶೀರ್ವಾದ ಪಡೆಯಲು ಬಂದರು. ಅವರು ಏನಾದರೂ ಹೇಳುವ ಮುನ್ನವೇ...





ಶೀಘ್ರದಲ್ಲಿಯೇ ಆತನಿಗೆ ಗಂಡು ಮಗು ಹುಟ್ಟಿತು. ಆತ ಶೃಂಗೇರಿಗೆ ಹಿಂತಿರುಗಿ ಪೂಜ್ಯರಿಗೆ ಸಂತೋಷದ ಸುದ್ದಿಯನ್ನು ಹೇಳಿದರು.




ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮದ ತತ್ತ್ವಗಳನ್ನು ಶ್ರದ್ಧೆಯಿಂದ ಪಾಲಿಸಬೇಕೆಂಬುದು ಸದಾ ಪೂಜ್ಯರ ಅಭಿಪ್ರಾಯವಾಗಿತ್ತು.

ಒಮ್ಮೆ ಕಾಲು ಊನವಾಗಿರುವ ಪುರುಷನೊಬ್ಬನು ದರ್ಶನಕ್ಕಾಗಿ ಜನ ಸಮೂಹದ ಮಧ್ಯೆ ಬರುತ್ತಿದ್ದನು. ಆ ಮನುಷ್ಯನು ಕಷ್ಟಪಟ್ಟು ಪ್ರಯತ್ನ ಮಾಡುತ್ತಿದ್ದರೂ ಬೇರೆಯವರ ಸಮಕ್ಕೆ ನಡೆಯಲು ಆಗುತ್ತಿರಲಿಲ್ಲ.




ಪೂಜ್ಯರು ದೂರದಿಂದಲೇ ಆತನನ್ನು ನೋಡಿದರು.





ಅವರು ಕೂಡಲೇ ಎದ್ದು ಮೆಟ್ಟಲನ್ನಿಳಿದು, ಆತನ ಬಳಿಗೆ ತೆರಳಿ ಅಕ್ಕರೆಯಿಂದ ವಿಚಾರಿಸಿಕೊಂಡು ಆಶೀರ್ವದಿಸಿದರು.




ಅಂಗವಿಕಲತೆಯನ್ನು ಹೊಂದಿದವರ ಬಗ್ಗೆ ಪೂಜ್ಯರು ವಿಶೇಷ ಕಾಳಜಿಯನ್ನು ತೋರುತ್ತಿದ್ದರು.

ಒಮ್ಮೆ ಹೆದ್ದಾರಿಯಲ್ಲಿ ಬುಡಮೇಲಾದ ಕಾರನ್ನು ಕಂಡರು. ಅಲ್ಲಿ ಸಂಚರಿಸುತ್ತಿದ್ದ ಹಲವಾರು ವಾಹನಗಳು ಅದರತ್ತ ಯಾವ ಗಮನವೂ ಕೊಡದೆ ಮುಂದೆ ಸಾಗುತ್ತಿದ್ದವು. ಪೂಜ್ಯರು ತಮ್ಮ ವಾಹನವನ್ನು ನಿಲ್ಲಿಸುವಂತೆ ಹೇಳಿ ಅದರತ್ತ ಧಾವಿಸಿದರು.





ವಾಹನದಲ್ಲಿ ಅಪಘಾತಕ್ಕೆ ಈಡಾಗಿ ಪ್ರಜ್ಞಾಹೀನನಾದ ವ್ಯಕ್ತಿಯೊಬ್ಬನನ್ನು ಕಂಡರು. ತಕ್ಷಣವೇ ಹತ್ತಿರವಿದ್ದ ಊರಿನಿಂದ ಆಂಬ್ಯುಲೆನ್ಸ್ ಅನ್ನು ಕರೆತರಲು ಮಠದ ವಾಹನವೊಂದನ್ನು ಕಳುಹಿಸಿದರು.


ಆ ವ್ಯಕ್ತಿಯನ್ನು ಹೊರತರಲು ಮೊದಲು ಉರುಳಿದ್ದ ವಾಹನವನ್ನು ಸರಿಪಡಿಸಬೇಕೆಂದು ತಿಳಿದು, ಅದನ್ನು ಆ ವ್ಯಕ್ತಿಗೆ ತೊಂದರೆ ಆಗದಂತೆ ಮಾಡಲು ಸಾಧ್ಯವೆಂದು ಗಮನಿಸಿದರು. ವಾಹನವನ್ನು ಸರಿಪಡಿಸಲು ಇತರರೊಂದಿಗೆ ತಾವೂ ಕೈ ಜೋಡಿಸಿದರು.




ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅರೆಕಾಲಿಕ ವೈದ್ಯರಿಗೆ (ಪ್ಯಾರಮೆಡಿಕ್ಸ್ ಗೆ) ಕಾಯದೆ ವ್ಯಕ್ತಿಯನ್ನು ಎಚ್ಚರಿಕೆಯಿಂದ ಹೊರತರಬಹುದೆಂದು ತಿಳಿದು, ಜಾಗ್ರತೆಯಿಂದ ಹೊರತಂದರು.




ನಂತರ ಆಂಬ್ಯುಲೆನ್ಸ್ ಬರುವ ಹಾದಿಯಲ್ಲಿಯೇ ಮಠಕ್ಕೆ ಸೇರಿದ ವಿಶಾಲವಾದ ವಾಹನದಲ್ಲಿ ಆತನನ್ನು ಆಸ್ಪತ್ರೆಗೆ ಕಳುಹಿಸಿದರು.





ಅವರು ಎಚ್ಚರಿಕೆ ವಹಿಸಿ ವೇಗವಾಗಿ ಕ್ರಮಗಳನ್ನು ತೆಗೆದುಕೊಂಡ ಕಾರಣದಿಂದ ಅಪಘಾತಕ್ಕೆ ಈಡಾಗಿದ್ದ ವ್ಯಕ್ತಿಗೆ ಆದಷ್ಟು ಬೇಗ ವೈದ್ಯಕೀಯ ಸಹಾಯ ಸಿಗುವಂತಾಯಿತು. ಆ ವ್ಯಕ್ತಿಯ ಪ್ರಾಣ ಉಳಿದು ಗುಣ ಹೊಂದಿದನು.


ಒಂದು ಪ್ರದೇಶದಲ್ಲಿ ಮೂರುವರ್ಷಗಳಿಂದ ಮಳೆಯಿರಲಿಲ್ಲ. ಆ ಸಮಯದಲ್ಲಿ ಪೂಜ್ಯರು ಅಲ್ಲಿ ವ್ಯಾಪಕವಾಗಿ ಸಂಚಾರ ಕೈಗೊಂಡರು. ಜನರು ಒಂದು ವಿಶೇಷವನ್ನು ಗಮನಿಸಿದರು...




ಒಮ್ಮೆ ಬೆಂಗಳೂರಿನಲ್ಲಿ ವಿಸ್ತಾರವಾದ ಮಠದ ಆವರಣದಲ್ಲಿ ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಆಕಾಶದಲ್ಲಿ ಕಪ್ಪು ಮಳೆಮೋಡಗಳು ದಟ್ಟೈಸಿ, ಭಾರಿ ಮಳೆ ಬರುವಂತಾಯಿತು. ಅಲ್ಲಿ ಸೇರಿದ್ದ ಅಪಾರ ಜನಸ್ತೋಮವು ಆತಂಕಕ್ಕೆ ಒಳಗಾಯಿತು. ಪೂಜ್ಯರು ಕೈಜೋಡಿಸಿ ಆಕಾಶದತ್ತ ಮುಖಮಾಡಿರುವುದನ್ನು ಅನೇಕರು ಗಮನಿಸಿದರು. ಕೆಲವೇ ಕ್ಷಣಗಳಲ್ಲಿ...




ಹಿಂದೆ ಸಾಂಪ್ರದಾಯಿಕ ಶಾಸ್ತ್ರಬದ್ಧವಾದ ಆಧ್ಯಾತ್ಮಿಕ ಆಚರಣೆಗಳು ಕೇವಲ ಪಂಡಿತರು ಹಾಗೂ ಆಧ್ಯಾತ್ಮದಲ್ಲಿ ಉನ್ನತ ಮಟ್ಟವನ್ನು ತಲುಪಿದವರಿಗೆ ಮಾತ್ರ ಸೀಮಿತವೆಂಬಂತಿತ್ತು. ಹಾಗಿದ್ದಾಗ, ತಾವು ಕೊಟ್ಟ ಸಾವಿರಾರು ಉಪನ್ಯಾಸಗಳ ಮೂಲಕ ಪೂಜ್ಯರು ಅದು ಪಾಮರರಿಗೂ ತಲುಪುವಂತೆ ಮಾಡಿದರು.





ಪೂಜ್ಯರು ಕನ್ನಡ, ತೆಲುಗು, ತಮಿಳು ಮತ್ತು ಹಿಂದಿ ಭಾಷೆಗಳನ್ನು ಮಾತನಾಡಲು ಸಮರ್ಥರಾಗಿದ್ದರು. ದೇಶಾದ್ಯಂತ ಜನರೊಡನೆ ನೇರವಾಗಿ ಸಂವಹನ ನಡೆಸಬಲ್ಲವರಾಗಿದ್ದರು.

1970ರ ಆರಂಭದಲ್ಲಿ ಒಂದು ಕಡೆ ಪೂಜ್ಯರು ಅನುಗ್ರಹ ಭಾಷಣವನ್ನು ನೀಡುವವರಿದ್ದರು.





ಆ ಧ್ವನಿವರ್ಧಕಗಳ ಸಂಪರ್ಕವನ್ನು ಸುಲಭವಾಗಿ ತೆಗೆಯಲು ಸಾಧ್ಯವೆಂದು ಗಮನಿಸಿದ ಪೂಜ್ಯರು ವ್ಯವಸ್ಥಾಪಕರಿಗೆ ಅವನ್ನು ತೆಗೆಯುವಂತೆ ತಿಳಿಸಿದರು.


# ಕರ್ಮಯೋಗವನ್ನು ಅಭ್ಯಾಸ ಮಾಡುವವರು, ಅಂದರೆ ಯಾವುದೇ ಅನುಬಂಧವಿಲ್ಲದೆ ಕೇವಲ ಭಗವಂತನಿಗಾಗಿ ಎಂದು ಕ್ರಿಯೆಗಳನ್ನು ಮಾಡುವ ಒಂದು ಆಧ್ಯಾತ್ಮಿಕ ಸಾಧನೆ


ಬೇಕಿಲ್ಲದವರಿಗೆ ಈ ಉಪನ್ಯಾಸವನ್ನು ಬಲವಂತವಾಗಿ ಕೇಳುವಂತೆ ಮಾಡುವುದು ನ್ಯಾಯವಲ್ಲ. ಶಬ್ದ ಮಾಲಿನ್ಯವನ್ನು ಮಾಡಬಾರದು.
ಇದು ನಡೆದದ್ದು ಭಾರತದಲ್ಲಿ ಶಬ್ದಮಾಲಿನ್ಯದ ಬಗ್ಗೆ ಇನ್ನೂ ಅರಿವೇ ಇಲ್ಲದಿದ್ದಂತಹ ಕಾಲದಲ್ಲಿ.
ದೇಶದ ಶಾಂತಿ ಮತ್ತು ಶ್ರೇಯಸ್ಸಿಗಾಗಿ ಹಲವಾರು ಕಡೆಗಳಲ್ಲಿ ಪೂಜ್ಯರು ಯಜ್ಞಗಳನ್ನು ನಡೆಸಿದರು.
ದೇಶಾದ್ಯಂತ ಸಂಚಾರ ಮಾಡುತ್ತಿದ್ದಾಗ ಭಾರತದ ಸಶಸ್ತ್ರ ಸೇನಾಪಡೆಗಳನ್ನು ಉದ್ದೇಶಿಸಿ ಮಾತನಾಡಲು ಹಲವಾರು ಬಾರಿ ಪೂಜ್ಯರನ್ನು ಆಹ್ವಾನಿಸಲಾಗಿತ್ತು.
ಯುದ್ಧಕ್ಕೆ ಮುನ್ನ ಕೃಷ್ಣನು ಅರ್ಜುನನಿಗೆ, 'ನನ್ನ ಬಗ್ಗೆ ಚಿಂತನೆ ಮಾಡುತ್ತಾ ಯುದ್ಧ ಮಾಡು' ಎಂದು ಬೋಧಿಸಿದ್ದನು. ನೀವುಗಳು ಹಾಗೆಯೇ ಮಾಡಬೇಕು, ದೇವರನ್ನು ಪ್ರಾರ್ಥಿಸಿ ನಂತರ ನಿಮ್ಮ ಕರ್ತವ್ಯವನ್ನು ಮಾಡಿ. ಹಾಗೆ ಮಾಡುವುದರಿಂದ ದೇವರ ಸೇವೆಯನ್ನು ಚೆನ್ನಾಗಿ ಮಾಡಿದಂತೆ.
ಯುದ್ಧ ಕಾಲದಲ್ಲಿ ರಾಷ್ಟ್ರೀಯ ಸಂರಕ್ಷಣಾ ನಿಧಿಗೆ ಮಠದಿಂದ ಉದಾರವಾಗಿ ಸಹಾಯವನ್ನು ನೀಡಿದರು.
ಪೂಜ್ಯರು ಉಜ್ವಲ ದೇಶಭಕ್ತರಾಗಿದ್ದರು.
ನಾವು ಮೊದಲು ಭಾರತೀಯರೆಂದು ಆಲೋಚಿಸಬೇಕು. ಪ್ರಾಂತೀಯಭಾವ ನಮ್ಮದಾಗಿರಬಾರದು.
ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿ ಹುತಾತ್ಮರಾದವರಬಗ್ಗೆ ಓದಿದಾಗ ಅವರ ಕಣ್ಣುಗಳು ತುಂಬಿಬರುತ್ತಿದ್ದವು.
ಪೂಜ್ಯರು ಕಟ್ಟುನಿಟ್ಟಾದ ಅಹಿಂಸಾ ಪಾಲಕರು, ಅವರು ಹಿಂಸಾಪ್ರವೃತ್ತಿಯನ್ನು ಲೇಶಮಾತ್ರವೂ ಸಹಿಸುತ್ತಿರಲಿಲ್ಲ. ದೇಶದಲ್ಲಿ ಗೋಹತ್ಯೆಯನ್ನು ಕುರಿತ ಚಳುವಳಿಯು ತೀವ್ರಸ್ವರೂಪ ತಾಳಿದಾಗ...
ಧರ್ಮದ ಆದರ್ಶವು ಕೇವಲ ಕೊನೆಮುಟ್ಟುವುದಕ್ಕೆ ಮಾತ್ರವಲ್ಲ, ಸಾಧನಕ್ಕೂ ಒಂದೇ ರೀತಿಯಲ್ಲಿ ಅನ್ವಯಿಸುತ್ತದೆ. ಹಸುವು ಉಪಕಾರಿ ಹಾಗೂ ಪೂಜನೀಯವಾಗಿರುವುದರಿಂದ ಅದನ್ನು ರಕ್ಷಿಸಬೇಕು. ಆದರೆ ಯಾರಿಗೂ ಬಾಧೆಯಾಗದಂತೆ ಮಾಡಬೇಕು.

ಅವರು ಕೇವಲ ಬೋಧಿಸುತ್ತಿರಲಿಲ್ಲ, ಸ್ವತಃ ಮಾಡಿ ತೋರಿಸುತ್ತಿದ್ದರು. ಪೂಜ್ಯರು ನೂರರಷ್ಟು ಹಸುಗಳಿರುವ ಗೋಶಾಲೆಯೊಂದನ್ನು ಶೃಂಗೇರಿಯಲ್ಲಿಯೇ ನಡೆಸುತ್ತಿದ್ದರು, ಹಸುಗಳನ್ನು ಅಕ್ಕರೆಯಿಂದ ಪಾಲಿಸುತ್ತಿದ್ದರು.




ಭಿನ್ನ-ಭಿನ್ನ ಮತಗಳ ಧರ್ಮಗುರುಗಳು ಪೂಜ್ಯರನ್ನು ಗೌರವ-ಆದರಗಳಿಂದ ಕಾಣುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಪೂಜ್ಯರ ಸಲಹೆ ಮತ್ತು ಅಶೀರ್ವಾದಗಳನ್ನು ತೆಗೆದು ಕೊಳ್ಳುತ್ತಿದ್ದರು.



ಪೂಜ್ಯರು ಕೇವಲ ಶ್ರಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳಷ್ಟೇ ಅಲ್ಲದೆ ವ್ಯವಸಾಯ, ತೋಟಗಾರಿಕೆ, ಎಂಜಿನಿಯರಿಂಗ್, ಛಾಯಾಗ್ರಹಣ, ಮತ್ತು ಎಲೆಕ್ಟ್ರಾನಿಕ್ಸ್ ಮುಂತಾದ ಇತರ ಹಲವಾರು ವಿಷಯಗಳಲ್ಲಿಯೂ ಆಳವಾದ ಆಸಕ್ತಿಯನ್ನು ಹೊಂದಿದ್ದರು.



ಉದಾರ ಮನಸ್ಸುಳ್ಳ ಪೂಜ್ಯರು ಜನರು ಹೇಗೆ ಇದ್ದರೆ ಹಾಗೆಯೇ ಇಷ್ಟಪಡುತ್ತಿದ್ದರು. ತಾವು ಹೇಳಿದಂತೆಯೇ ಇರಬೇಕೆಂಬ ನಿರೀಕ್ಷೆ ಮಾಡುತ್ತಿರಲಿಲ್ಲ. ಅವರ ನಿರ್ಮಲ ಪ್ರೇಮ ಎಲ್ಲರನ್ನೂ ಅವರತ್ತ ಸೆಳೆಯುತ್ತಿತ್ತು.




ಪ್ರಸಿದ್ಧ ಸಂಶೋಧಕರಾಗಿದ್ದ ಶ್ರೀ ಜಿ. ಡಿ. ನಾಯ್ಡು ಅವರು ತಾವು ನಾಸ್ತಿಕರೆಂದು ಹೇಳಿಕೊಳ್ಳುತ್ತಿದ್ದರು. ಆದರೆ ಪೂಜ್ಯರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು, ಅದೆಷ್ಟೆಂದರೆ ತಾವು ನಿರ್ಮಿಸಿದ ತಾಂತ್ರಿಕ ತರಬೇತಿ ಸಂಸ್ಥೆ ಮತ್ತು ಸಭಾಂಗಣಕ್ಕೆ ಪೂಜ್ಯರ ಹೆಸರನ್ನೇ ಇಟ್ಟರು.

ಜೀವನೋತ್ಸಾಹದಿಂದ ತುಂಬಿದ್ದ ಪೂಜ್ಯರು ತಮಗೆ ಪ್ರಿಯವಾದದ್ದು - ಈಜುವುದನ್ನು - ಮಾಡಲು ಪ್ರತಿಯೊಂದು ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಯಾವ ನದಿ ಅಥವಾ ಸಮುದ್ರವನ್ನೂ ಈ ಪರಿಣಿತ ಈಜುಗಾರರು ಬಿಟ್ಟಿರಲಿಲ್ಲ!




ಪೂಜ್ಯರು ಯಾವ ಕೆಲಸವನ್ನು ಕೈಗೊಂಡರೂ ಅಚ್ಚುಕಟ್ಟಾಗಿಯೇ ಮಾಡುತ್ತಿದ್ದರು. ತುಂಗಾ ನದಿಗೆ ಸೇತುವೆ ಕಟ್ಟುವ ಯೋಜನೆ ಹಾಕಿಕೊಂಡಿದ್ದರು. ಅದರ ಬಗ್ಗೆ ಮಾತನಾಡಲು ಬಹುರಾಷ್ಟ್ರೀಯ ನಿರ್ಮಾಣ ಸಂಸ್ಥೆಯ ಉನ್ನತ ನಿರ್ವಹಣಾ ತಂಡವನ್ನು ಶೃಂಗೇರಿಗೆ ಬರಮಾಡಿಕೊಂಡರು.





ವಿಶ್ವದ ಮುಖ್ಯ ಸೇತುವೆಗಳ ಛಾಯಾಚಿತ್ರಗಳು ಹಾಗೂ ತಾಂತ್ರಿಕ ವಿವರಗಳನ್ನು ತಾವೇ ಸಂಗ್ರಹಿಸಿದ್ದರು. ಪುಸಕರೂಪದಲ್ಲಿದ್ದ ಅದನ್ನು ಹೊರತೆಗೆದು ತೋರಿಸುತ ಪೂಜ್ಯರು ಶೃಂಗೇರಿಗೆ ಯಾವ ರೀತಿಯ ಸೇತುವೆ ಸರಿಹೊಂದಬಹುದು ಎಂದು ಚರ್ಚೆ ಮಾಡಿದರು.


ಆ ವಿಷಯದ ಬಗ್ಗೆ ಪೂಜ್ಯರಿಗಿದ್ದ ಆಳವಾದ ಜ್ಞಾನವನ್ನು ಕಂಡು ಉನ್ನತ ನಿಯೋಗದ ಸದಸ್ಯರಿಗೆ ಸಂತಸದ ವಿಸ್ಮಯ ಉಂಟಾಯಿತು. ನಿಯೋಗವು ಹೊರಗೆ ಬರುತ್ತಿದ್ದಂತೆ...




ಪೂಜ್ಯರ ನಾಗರೀಕಪ್ರಜ್ಞೆ ಹಲವಾರು ಬಾರಿ ಪ್ರಕಟಗೊಳ್ಳುತ್ತಿತ್ತು. ಒಮ್ಮೆ ರಸ್ತೆಗೆ ಅಡ್ಡವಾಗಿ ಮರವೊಂದು ಬಿದ್ದಿತ್ತು. ವಾಹನಗಳೆಲ್ಲಾ ಅದನ್ನು ಸುತ್ತು ಬಳಸಿ ಹೋಗುತ್ತಿದ್ದವು. ಪೂಜ್ಯರ ವಾಹನವು ಅಲ್ಲಿಗೆ ಬಂದಾಗ...




ಪೂಜ್ಯರ ನಿರ್ದೇಶನದಂತೆ ಹಾಗೂ ಸ್ವತಃ ಅವರ ಸಹಾಯದಿಂದ ಮಠದ ಕಾರ್ಯಕರ್ತರು ಅಡ್ಡಲಾಗಿದ್ದ ಮರವನ್ನು ತೆರವುಗೊಳಿಸಿದರು.




ಸಾರ್ವಜನಿಕರಿಗೆ ಉಂಟಾಗಿದ್ದ ಅಡಚಣೆಯನ್ನು ಹೋಗಲಾಡಿಸಿಯೇ ಅವರ ಪ್ರಯಾಣವನ್ನು ಮುಂದುವರೆಸಿದರು.

ಬೇರೆಯವರ ಅನುಕೂಲಕ್ಕಾಗಿ ತಮ್ಮ ಸೌಕರ್ಯವನ್ನು ಪರಿಗಣಿಸದೆ ದಿನಚರಿಯಲ್ಲಿ ಹೊಂದಿಕೆಯನ್ನು ಮಾಡಿಕೊಳ್ಳುವುದಕ್ಕೆ ಪೂಜ್ಯರು ಹಿಂಜರಿಯುತ್ತಿರಲಿಲ್ಲ. ಒಮ್ಮೆ ಒಬ್ಬ ವೃದ್ಧ ಮಹಿಳೆ ಉತ್ತರ ಭಾರತದಿಂದ ಶೃಂಗೇರಿಗೆ ಬಂದರು.




ಈ ಪ್ರವಾಸಕ್ಕಾಗಿ ಬಹುಕಾಲದಿಂದ ಹಣವನ್ನು ಕೂಡಿಸಿದ್ದು ಪೂಜ್ಯರ ದರ್ಶನವನ್ನು ಪಡೆಯುವುದಕ್ಕೆಂದೇ ಅಷ್ಟು ದೂರದಿಂದ ಬಂದಿದ್ದರು. ಅವರು ಎರಡು ದಿನಗಳಷ್ಟೇ ಅಲ್ಲಿ ತಂಗುವವರಿದ್ದರು.

ಆ ಬಡ ಭಕ್ತರ ಮೇಲಿನ ಅನುಕಂಪದಿಂದ ಪೂಜ್ಯರು ತಮ್ಮ ಬಿಡುವಿಲ್ಲದ ದಿನಚರಿಯಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಆ ಪ್ರವಾಸಿ ಮಹಿಳೆಗೆ ಸಹಾಯವಾಗುವಂತೆ ಸಾರ್ವಜನಿಕ ದರ್ಶನವನ್ನು ದೀರ್ಘಕಾಲ ನೀಡಿದರು.




ಪೂಜ್ಯರ ಅನುಕಂಪ ಎಲ್ಲಾ ಜೀವಿಗಳಿಗೂ ವಿಸ್ತರಿಸಿತ್ತು. ಒಮ್ಮೆ ಪೂಜ್ಯರ ಭಕ್ತರೊಬ್ಬರು ಗಾಯಗಳನ್ನು ಗುಣಪಡಿಸಲು ಅತ್ಯಂತ ಉಪಯುಕ್ತವೆಂದು ಕಂಡುಕೊಂಡಿದ್ದ ಅಮೂಲ್ಯವಾದ ಗಿಡಮೂಲಿಕೆಯಿಂದ ತಯಾರಾದ ಮುಲಾಮನ್ನು ಕೊಟ್ಟರು.





ಕೆಲವು ದಿನಗಳ ನಂತರ, ಬೀದಿ ನಾಯಿಯೊಂದು ತೀವ್ರವಾಗಿ ಗಾಯಗೊಂಡು, ರಸ್ತೆಯ ಬದಿಯಲ್ಲಿಯೇ ಬಿದ್ದು, ನೋವಿನಿಂದ ನರಳುತ್ತಿದ್ದುದನ್ನು ಪೂಜ್ಯರು ಕಂಡರು. ಒಂದು ಕ್ಷಣವೂ ತಡ ಮಾಡದೆ...





ನಿತ್ಯವೂ ಆ ಗಾಯವನ್ನು ಸ್ವಚ್ಛಗೊಳಿಸಿ ಲೇಪವನ್ನು ಸ್ವಲ್ಪದಿನಗಳ ಕಾಲ ಹಚ್ಚುತ್ತಿರುವಂತೆ ಪೂಜ್ಯರು ನೋಡಿಕೊಂಡರು. ಆ ಗಾಯವು ಬಹಳ ಬೇಗ ವಾಸಿಯಾಗಿ, ನಾಯಿಯು ಮೊದಲಿನಂತೆ ಆಯಿತು.




ಒಮ್ಮೆ ಭಕ್ತರೊಬ್ಬರು ಸಮಸ್ಯೆಯೊಂದಿಗೆ ಪೂಜ್ಯರ ಬಳಿ ಬಂದರು. ಅವರ ನಡುವೆ ಆಸಕ್ತಿಕರವಾದ ಸಂಭಾಷಣೆ ನಡೆಯಿತು.





“ಉದಾಹರಣೆಗೆ, ಯಾರಾದರೂ ನಿಮ್ಮನ್ನು ನಿಂದಿಸುತ್ತಿದ್ದಾಗ ನಿಮಗೆ ಕೋಪ ಉಕ್ಕಿ ಬಂದರೆ, ನೀವು ಹೀಗೆ ಯೋಚಿಸ ಬಹುದು...”






ನನ್ನ ಶತ್ರು ಈ ವ್ಯಕ್ತಿಯಲ್ಲ, ಕೋಪವಷ್ಟೆ. ಎಷ್ಟೇ ಆದರೂ ಕೋಪ ತಾನೆ ನನ್ನ ಮನಸ್ಸನ್ನು ಕಲಕಿ, ಸಮಚಿತ್ತತೆಯಿಂದ ಯೋಚಿಸುವ ಸಾಮರ್ಥ್ಯವನ್ನು ಕುಂಠಿತಗೊಳಿಸಿ, ಮಾಡಬಾರದ್ದನ್ನು ಮಾಡುವಂತೆ ಪ್ರೇರೇಪಿಸಿ ಶಾಂತಿಯನ್ನು ಹಾಳುಮಾಡಿ ನನ್ನ ಆರೋಗ್ಯಕ್ಕೂ ತೊಂದರೆ ಮಾಡುತ್ತದೆ.
ಕೋಪವನ್ನು ಬಿಟ್ಟೇಬಿಟ್ಟರೆ ಇತರರು ನನ್ನ ಸೌಮ್ಯತೆಯನ್ನು ದುರುಪಯೋಗ ಮಾಡಿಕೊಳ್ಳುವುದಿಲ್ಲವೇ?
ಅನಿವಾರ್ಯವಾದಲ್ಲಿ ಕೋಪದ ಅಭಿನಯವನ್ನು ಮಾಡಬಹುದು. ಆದರೆ ಸೇಡು ಮುಂತಾದ ಯೋಚನೆಗಳಿಗೆ ಅವಕಾಶವನ್ನು ಕೊಟ್ಟು ಮನಸ್ಸಿನ ನೆಮ್ಮದಿಯನ್ನು ಕಳೆದುಕೊಳ್ಳಬಾರದು.
ನಂತರ ಪೂಜ್ಯರು ಜನರೊಡನೆ ಸಂವಹನ ಮಾಡುವುದರಬಗ್ಗೆ ಅಮೂಲ್ಯವಾದ ಆಧ್ಯಾತ್ಮಿಕ ಸಲಹೆಯೊಂದನ್ನು ಹಂಚಿಕೊಂಡರು.
ಅಕಾರಣ ಆಕ್ಷೇಪಗಳಿದ್ದಲ್ಲಿ, ಹೀಗೆ ಯೋಚಿಸುವುದು ಯೋಗ್ಯವೆನಿಸುತ್ತದೆ, "ಬೇರೆಯವರನ್ನು ಖುಷಿ ಪಡಿಸುವುದು ದೇವರಿಗೆ ಪೂಜೆ ಮಾಡಿದಂತೆ. ನನ್ನನ್ನು ನಿಂದಿಸುವುದರಿಂದ ಈ ವ್ಯಕ್ತಿಯು ಏನೋ ಸಂತೋಷವನ್ನ ಕಂಡುಕೊಳ್ಳುತ್ತಿದ್ದಾರೆ, ಇದರ ಮೂಲಕ ನಾನು ದೇವರನ್ನು ಆರಾಧಿಸಲು ಸುಲಭ ಮಾಡುತ್ತಿದ್ದಾರೆ!"
ನಂತರ ಪೂಜ್ಯರು ತಮಗೆ ಸಹಜವಾದ ವಾಸ್ತವಿಕತೆ ಹಾಗೂ ಹಾಸ್ಯಪ್ರಜ್ಞೆಯಿಂದ ಹೇಳಿದರು...
“ಬೇರೆಯವರನ್ನು ಸಂತೋಷ ಪಡಿಸುವುದು” ಎಂಬ ವಾಕ್ಯದ ಬಗ್ಗೆ ಎಚ್ಚರಿಕೆ ವಹಿಸಬೇಕು. ಉದಾಹರಣೆಗೆ, ತಪ್ಪನ್ನು ಮಾಡುತ್ತಿರುವ ವ್ಯಕ್ತಿಯನ್ನು ತೆಗೆದುಕೊಳ್ಳೋಣ. ಅವನ ಅಪರಾಧಕ್ಕೆ ಸಹಾಯ ಮಾಡಿ ಅವನನ್ನು ಸಂತೋಷ ಪಡಿಸಬಹುದು. ಆದರೆ ಅದು ಖಂಡಿತವಾಗಿಯೂ ದೇವರನ್ನು ಪೂಜಿಸಿದಂತಾಗುವುದಿಲ್ಲ!
ದೊಡ್ಡ ಸಮಸ್ಯೆಗಳಿಂದ ಹೊರಬರುವುದಕ್ಕೂ ಪೂಜ್ಯರ ಅನುಗ್ರಹವೇ ಸಾಕಾದಂತಹ ಪ್ರಸಂಗಗಳು ಅಸಂಖ್ಯಾತ. ಭಕ್ತರೊಬ್ಬರ ತಾಯಿಯು ಕಾಯಿಲೆಗೀಡಾದರು. ಹಲವಾರು ವೈದ್ಯಕೀಯ ಪರೀಕ್ಷೆಗಳ ನಂತರ...
ನಿಮ್ಮ ತಾಯಿಗೆ ಬೆನ್ನೆಲುಬಿನ ಕ್ಯಾನ್ಸರ್ ಇದೆ. ಹೀಗೆ ಹೇಳುತ್ತಿರುವುದಕ್ಕಾಗಿ ಕ್ಷಮಿಸಿ, ಇದನ್ನು ಗುಣಪಡಿಸಲು ಸಾಧ್ಯವಿಲ್ಲ.
ದಿಗ್ಭ್ರಮೆಗೊಂಡು, ಏನು ಮಾಡಬೇಕೆಂದು ತೋಚದೆ ಆ ಭಕ್ತರು ಭಾಗ್ಯವಶಾತ್ ಹತ್ತಿರದ ಊರಿನಲ್ಲಿಯೇ ತಂಗಿದ್ದ ಪೂಜ್ಯರತ್ತ ಧಾವಿಸಿ ಈ ವಿಷಯವನ್ನು ಹೇಳಿಕೊಂಡರು.
ಅವರಿಗೆ ಕ್ಯಾನ್ಸರ್ ಕಾಯಿಲೆ ಇಲ್ಲ. ಪರೀಕ್ಷೆಗಳನ್ನು ಮತ್ತೊಮ್ಮೆ ಮಾಡಿಸಿ. ಚಿಂತೆ ಬೇಡ.

ಭಕ್ತರು ಹಿಂತಿರುಗಿ ಮತ್ತೊಮ್ಮೆ ತಮ್ಮ ತಾಯಿಯನ್ನು ಪರೀಕ್ಷಿಸಲು ವೈದ್ಯರನ್ನು ವಿನಂತಿಸಿದರು. ಪರೀಕ್ಷೆಗಳೆಲ್ಲಾ ಮತ್ತೊಮ್ಮೆ ನಡೆದವು. ಆ ವೈದ್ಯರ ಅಚ್ಚರಿ ಮತ್ತು ಭಕ್ತರ ಸಂತೋಷಕ್ಕೆ...





ದೇವಸ್ಥಾನವೊಂದರ ಅರ್ಚಕರು ತಮ್ಮ ಕೆಲಸವನ್ನು ಅಕಸ್ಮಾತ್ತಾಗಿ ಬಿಟ್ಟು ಮತ್ತೊಂದನ್ನು ಹುಡುಕಬೇಕಾದ ಸಂದರ್ಭ ಒದಗಿತು. ಇದರಿಂದ ಅವರ ಆರ್ಥಿಕ ಪರಿಸ್ಥಿತಿ ಗಂಭೀರಗೊಂಡಿತು. ಆತ ಪೂಜ್ಯರ ಬಳಿ ತೆರಳಿ ತಮ್ಮ ತೊಂದರೆಯನ್ನು ತೋಡಿಕೊಂಡರು.





ಪೂಜ್ಯರ ಅನುಗ್ರಹವೇ ವೇಗವರ್ಧಕದಂತೆ ಇದ್ದು ನಿರೀಕ್ಷೆಯೇ ಮಾಡದ ಮೂಲಗಳಿಂದ ಸ್ವಯಂಪ್ರೇರಿತ ಕೊಡುಗೆಗಳ ರಾಶಿ ಬಂದಿತು. ಆ ಅರ್ಚಕರ ಆಶ್ಚರ್ಯಕ್ಕೆ ದೇವಾಲಯದ ನಿರ್ಮಾಣವು ಅತಿಶೀಘ್ರದಲ್ಲಿಯೇ ನೆರವೇರಿತು.

ಹಲವಾರು ಬಾರಿ, ಜನರು ತಮ್ಮ ಕಷ್ಟಗಳನ್ನು ಸುಧಾರಿಸಲು ನೆರವಾಗುವಂತೆ ಪೂಜ್ಯರು ನಿರ್ದಿಷ್ಟ ಪ್ರಾಯಶ್ಚಿತ್ತ ಕರ್ಮವನ್ನಾಗಲಿ ಅಥವಾ ಮಂತ್ರಜಪವನ್ನಾಗಲಿ ಮಾಡುವಂತೆ ಹೇಳುತ್ತಿದ್ದರು. ಒಮ್ಮೆ ದುಃಖಿತರಾದ ಭಕ್ತರೊಬ್ಬರು ಪೂಜ್ಯರ ಬಳಿ ಬಂದರು.






ಆ ಹುಡುಗನು ಪೂಜ್ಯರ ಸೂಚನೆಯನ್ನು ನಿಷ್ಠೆಯಿಂದ ಪಾಲಿಸಿದನು. ವೈದ್ಯರಿಗೆ ಅಚ್ಚರಿ ಎನಿಸುವಂತೆ, ಅವನ ತೊಂದರೆ ಕ್ರಮೇಣ ಗುಣವಾಯಿತು.


ಒಬ್ಬ ಎಳೆಯ ಭಕ್ತ ತನ್ನ ಪರೀಕ್ಷೆಗೆ ಸರಿಯಾಗಿ ತಯಾರಿ ಮಾಡಿಕೊಂಡಿಲ್ಲವೆಂದೂ ಪೂಜ್ಯರ ಆಶೀರ್ವಾದವನ್ನೇ ನಂಬಿಕೊಂಡಿದ್ದೇನೆ ಎಂದು ಕಾಗದವನ್ನು ಬರೆದನು. ಮೊದಲು ಪೂಜ್ಯರು ತಮಾಷೆಯಾಗಿ ಪ್ರತಿಕ್ರಿಯೆ ನೀಡಿದರು...






ನಂತರ ಪೂಜ್ಯರು ಸರಿಯಾದ ಮನೋಭಾವನೆ ಹೇಗಿರಬೇಕೆಂದು ತಿಳಿಹೇಳಿದರು...





ಎಂತಹದ್ದೇ ತುರ್ತು ಸಂದರ್ಭದಲ್ಲಿಯೂ ಅಥವಾ ತಮಗೆ ಅನಾರೋಗ್ಯವಾದಾಗಲೂ ಪೂಜ್ಯರು ದಿನನಿತ್ಯದ ಧಾರ್ಮಿಕ ಕರ್ತವ್ಯಗಳನ್ನು ತಪ್ಪಿಸುತ್ತಿರಲಿಲ್ಲ.
ಪ್ರತಿ ಸಂಜೆ ಪೂಜ್ಯರು ಮಾಡುವ ಪೂಜೆಯನ್ನು ನೋಡಲು ಹಲವಾರು ಜನರು ಸೇರುತ್ತಿದ್ದರು. ಒಮ್ಮೆ ಸುಂದರವಾದ ಬೇರೆ ಬೇರೆ ಬಣ್ಣದ ರೋಜಾ ಹೂವುಗಳನ್ನು ಪೂಜೆಗಾಗಿ ಇಟ್ಟಿದ್ದರು.
ಪ್ರತಿದಿನದಂತೆ, ಪೂಜ್ಯರು ಒಂದಾದಮೇಲೊಂದು ಹೂವನ್ನು ಪೂಜೆ ಮಾಡಿದರು.
ಅರ್ಚನೆಯು ಮುಗಿದಂತೆ ಒಂದೇ ಬಣ್ಣದ ಹೂವುಗಳು ಭಗವಂತನಿಗೆ ಮಾಲೆಯಂತೆ ಪೋಣಿಸಿದಂತಿದ್ದವು.
ಅಲ್ಲಿ ಸೇರಿದ್ದ ಜನರ ಗುಂಪು ಸುಂದರವಾದ ಕಲಾತ್ಮಕತೆಯನ್ನು ಕಂಡು, ಉಕ್ಕಿಬಂದ ಸಂತೋಷವನ್ನು ವ್ಯಕ್ತಪಡಿಸಲು ವಾಡಿಕೆಯಲ್ಲದಿದ್ದರೂ ಚಪ್ಪಾಳೆ ತಟ್ಟಿದರು!
ಒಮ್ಮೆ ಪೂಜ್ಯರು ಪೂಜೆಯನ್ನು ಮಾಡುತ್ತಿದ್ದಾಗ, ಸಹಾಯಕರೊಬ್ಬರು ನೈವೇದ್ಯಗಳನ್ನು ತಂದರು...
ನಿಮಗೆ ಪಾತ್ರೆಯನ್ನೇ ಕೈಯಲ್ಲಿ ಹಿಡಿಯಲಾರದಷ್ಟು ಬಿಸಿಯಿರುವಾಗ ಇದನ್ನು ನಾವು ದೇವರಿಗೆ ಹೇಗೆತಾನೆ ನೈವೇದ್ಯವನ್ನು ಮಾಡಲು ಸಾಧ್ಯ?
ಆಹಾರವು ಸಾಕಷ್ಟು ತಂಪಾಗಲು ಕಾದಿದ್ದು ಪೂಜ್ಯರು ಅದನ್ನು ಸಮರ್ಪಣೆ ಮಾಡಿದರು. ಅವರು ಭಕ್ತಿಯಿಂದ ಪೂಜೆಯನ್ನು ಮಾಡುತ್ತಿದ್ದ ವಿಧಾನ ಹೀಗೆ.
ಒಮ್ಮೆ ಮೂರ್ತಿ ಪೂಜೆಯ ಅರ್ಥವನ್ನು ಸ್ವಾರಸ್ಯಕರವಾದ ಕಥೆಯ ಮೂಲಕ ಪೂಜ್ಯರು ತಿಳಿ ಹೇಳಿದರು.
ಒಬ್ಬರು ಮಣ್ಣಿನಿಂದ ಮಾಡಿರುವ ಗಣಪತಿಯ ವಿಗ್ರಹವನ್ನು ಕೊಂಡು ಅದನ್ನು ಪೂಜೆ ಮಾಡಲು ಪ್ರಾರಂಭಿಸಿದರು. ಭಕ್ತಿಪೂರ್ವಕ ಪೂಜೆಯಾದ ಮೇಲೆ ಆ ವಿಗ್ರಹವನ್ನು ಸಮುದ್ರದಲ್ಲಿ ವಿಸರ್ಜಿಸಿದರು. ಅದನ್ನು ನೋಡಿದ ಮಿತ್ರರೊಬ್ಬರು ವಿಸ್ಮಯಗೊಂಡರು.
ಮೂರ್ತಿಯನ್ನು ಸಾಗರದಲ್ಲಿ ಏಕೆ ಬಿಟ್ಟುಬಿಟ್ಟೆ?
ಮಣ್ಣಿನ ಮೂರ್ತಿಯಲ್ಲಿ ದೇವರನ್ನು ಆವಾಹನೆ ಮಾಡಿದಾಗ ಅದು ಪವಿತ್ರವಾಯಿತು, ಭಗವಂತನೆಂದೇ ಭಾವಿಸುತ್ತಾ ಪೂಜೆ ಮಾಡಿದೆ. ಕೊನೆಗೆ, ದೇವರನ್ನು ತಮ್ಮ ವಿಶೇಷ ಉಪಸ್ಥಿತಿಯಿಂದ ಹಿಂದಿರುಗಲು ಪ್ರಾರ್ಥಿಸಿದೆ. ಭಗವಂತನನ್ನಲ್ಲ, ಆ ಮಣ್ಣಿನ ತುಂಡನ್ನು ನಾನು ಸಮುದ್ರದಲ್ಲಿ ವಿಸರ್ಜಿಸಿದೆ.









ಒಂದು ಬಾರಿ, ಯುವ ವಕೀಲನೊಬ್ಬ ಶೃಂಗೇರಿಗೆ ಬಂದಾಗ ಒಂದು ಸ್ವಾರಸ್ಯಕರವಾದ ಪ್ರಸಂಗ ನಡೆಯಿತು. ವಕೀಲನು ಪೂಜ್ಯರ ಶಿಷ್ಯರೊಬ್ಬರೊಡನೆ...




ಕೆಲವೇ ನಿಮಿಷಗಳಲ್ಲಿ ಬಾಗಿಲನ್ನು ತೆರೆಯಲಾಯಿತು. ಆ ವಕೀಲನೂ ಭಕ್ತರ ಸಮೂಹವನ್ನು ಹಿಂಬಾಲಿಸಿ ಕೋಣೆಯ ಒಳಗೆ ಹೋದನು.


ಪೂಜ್ಯರನ್ನು ನೋಡುತ್ತಿದ್ದಂತೆಯೇ ಆ ವಕೀಲನು ಅಪ್ರಯತ್ನವಾಗಿ ಸಾಷ್ಟಾಂಗ ಪ್ರಣಾಮ ಮಾಡಿಬಿಟ್ಟನು, ಸ್ವಲ್ಪ ಸಮಯ ಹಾಗೆಯೇ ಉಳಿದನು. ಕೊನೆಗೆ...





ದಯವಿಟ್ಟು ನನ್ನನ್ನು ಆಶೀರ್ವದಿಸಿ.
ವಕೀಲನು ಹೊರಗೆ ಬಂದ ಮೇಲೆ, ಮುಂಚೆ ಮಾತನಾಡಿದ್ದ ಶಿಷ್ಯರನ್ನು ಕಂಡನು.
ನಾನು ಹಾಗೇಕೆ ವರ್ತಿಸಿದೆ ಎಂದು ಯೋಚಿಸುತ್ತಿದ್ದೀರಾ?
ಇಲ್ಲ, ಈ ರೀತಿ ನಡೆಯುವುದನ್ನು ನಾನು ಆಗಾಗ್ಗೆ ನೋಡಿದ್ದೇನೆ.
ಪೂಜ್ಯರ ಅನುಗ್ರಹಕ್ಕಾಗಿ ಬಂದ ಜನರಷ್ಟೇ ಅಲ್ಲ, ಕೆಲವು ಬಾರಿ ಅಪರಿಚಿತರೂ ಅವರ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದರು. ಒಮ್ಮೆ ಒಂದು ಮಗುವಿನ ಆರೋಗ್ಯ ಬಹಳ ಗಂಭೀರಗೊಂಡ ಮೇಲೆ ಪ್ರಸಿದ್ಧ ವೈದ್ಯರತ್ತ ಅದನ್ನು ಕರೆದೊಯ್ದರು.
ನೀವು ಮಗುವನ್ನು ತುಂಬ ತಡವಾಗಿ ಕರೆತಂದಿದ್ದೀರ. ಕ್ಷಮಿಸಿ, ನನಗೆ ಈಗ ಏನೂ ಮಾಡಲಾಗುವುದಿಲ್ಲ.
ತಂದೆತಾಯಿಗಳು ಬೇಡಿದಾಗ, ಅವರು ಹತ್ತಿರದ ಆಸ್ಪತ್ರೆಯಲ್ಲಿ ಮಗುವನ್ನು ಸೇರಿಸುವಂತೆ ಸಲಹೆ ನೀಡಿದರು.
ಆ ರಾತ್ರಿ ಅಪರಿಚಿತರಾದ ಸಂನ್ಯಾಸಿಯೊಬ್ಬರು ವೈದ್ಯರ ಕನಸಿನಲ್ಲಿ ಬಂದರು.
ಮಗುವಿಗೆ ನೀವು ಈ ಔಷಧಿಗಳನ್ನು ಏಕೆ ಕೊಡಬಾರದು?
ವೈದ್ಯರಿಗೆ ಎಚ್ಚರವಾದಾಗ, ಅವರಿಗೆ ಕನಸಿನಲ್ಲಿ ತಿಳಿಸಿದ ಔಷಧಿಗಳು ಮಗುವಿಗೆ ಸಹಾಯವಾಗ ಬಹುದು ಎಂದೆನಿಸಿತು. ಅವರು ಆಸ್ಪತ್ರೆಗೆ ತೆರಳಿ ಮಗುವಿಗೆ ಆ ಔಷಧಗಳನ್ನು ನೀಡಿದರು.
ಅವರಿಗೆ ಸಂತೋಷವೆನಿಸುವಂತೆ ಆ ಮಗುವು ಚೇತರಿಸಿಕೊಂಡು ಸ್ವಲ್ಪಕಾಲದಲ್ಲಿಯೇ ಮನೆಗೆ ಹಿಂತಿರುಗಿತು.
ಸ್ವಲ್ಪ ದಿನಗಳ ನಂತರ ಅದೇ ಸಂನ್ಯಾಸಿಯು ವೈದ್ಯರ ಕನಸಿನಲ್ಲಿ ಮತ್ತೆ ಕಾಣಿಸಿಕೊಂಡರು...
ನನ್ನನ್ನು ಮರೆತುಬಿಟ್ಟಿದ್ದೀರಾ?
ನೀವು ಯಾರೆಂದು ನನಗೆ ತಿಳಿಯದು!
ನಾನು ಶೃಂಗೇರಿಯವನು.
ವೈದ್ಯರು ಶೃಂಗೇರಿಗೆ ತೆರಳಿದರು...
ಓ! ಇವರನ್ನೇ ನಾನು ಕನಸಿನಲ್ಲಿ ಕಂಡದ್ದು!


ಆಧ್ಯಾತ್ಮಿಕ ಸಾಧಕರಿಗೆ ಪೂಜ್ಯರು ಅತಿಹೆಚ್ಚಿನ ಮಹತ್ವವನ್ನು ಕೊಡುತ್ತಿದ್ದರು. ಒಮ್ಮೆ ವೇದಾಂತದ ಬಗ್ಗೆ ಸ್ಪಷ್ಟತೆಯನ್ನು ಪಡೆಯಲು ವಿದೇಶೀಯ ಆಸ್ತಿಕ ಮಹಾಶಯರೊಬ್ಬರು ಬಂದರು.
ನೀವು ಎಲ್ಲಿಂದ ಬಂದಿದ್ದೀರ?
ಇಟಲಿ ಇಂದ
ಆ ಸಂದರ್ಭದಲ್ಲಿ ಶಿಷ್ಯಸ್ವೀಕಾರ ಸಮಾರಂಭವು ನಡೆಯುವುದಿತ್ತು. ಬೇರಾವುದಕ್ಕೂ ಸಮಯ ಕೊಡಲು ಕಷ್ಟಕರವಾಗಿದ್ದರೂ ಪೂಜ್ಯರು ಇದಕ್ಕೆ ಬಿಡುವುಮಾಡಿಕೊಂಡರು.
ಆ ಒಂದೇ ಚೈತನ್ಯವು ಪ್ರತಿಯೊಂದು ಪ್ರಾಣಿಯನ್ನು ಜೀವಂತವಾಗಿರಿಸಿರುವುದು.
ಒಬ್ಬ ಭಾಷಾಂತರಕಾರರ ಸಹಾಯದಿಂದ ಪೂಜ್ಯರು ಆ ವಿದೇಶಿ ಮಹಾಶಯರ ಪ್ರತಿಯೊಂದು ಸಂಶಯವನ್ನೂ ನಿವಾರಿಸಿದರು.
ಅಷ್ಟೊಂದು ಸಮಯವನ್ನು ಮೀಸಲಾಗಿರಿಸಿದ ಬಗ್ಗೆ ಅವರನ್ನು ಕೇಳಿದಾಗ ಹೇಳಿದರು...
ಆತ ಶ್ರದ್ಧಾವಂತರು. ಕಲಿಯಬೇಕೆಂದೇ ಅಷ್ಟುದೂರದಿಂದ ಇಲ್ಲಿಗೆ ಬಂದಿದ್ದಾರೆ. ಅವರಿಗೆ ಹೇಳಿಕೊಡುವುದು ನನ್ನ ಕರ್ತವ್ಯ. ಅದರಿಂದ ಸಮಯ ಹೇಗೆಯಾದರೂ ಮಾಡಿಕೊಳ್ಳಲೇ ಬೇಕು.
ಪೂಜ್ಯರು ಕೆಲವರಿಗೆ ವೇದಾಂತ ಪಾಠವನ್ನು ಹೇಳಿಕೊಡುತ್ತಿದ್ದರು. ಪಾಠವು ಶಾಸ್ತ್ರೋಕ್ತವಾಗಿ ನಡೆಯುತ್ತಿದ್ದುದರಿಂದ, ಪೂಜ್ಯರು ಸಂಸ್ಕೃತ ಭಾಷೆಯಲ್ಲಿಯೇ ಕಲಿಸಿಕೊಡುತ್ತಿದ್ದರು. ಆ ಸಮಯದಲ್ಲಿ ವೃದ್ಧ ದಂಪತಿಗಳಿಗೆ ಪಾಠವನ್ನು ಕೇಳುವ ಅನುಮತಿ ಕೊಟ್ಟರು.
ಮೊದಲ ಪಾಠದ ನಂತರ ವೃದ್ಧ ಭಕ್ತೆಯು ತಮ್ಮ ಕಷ್ಟವನ್ನು ತೋಡಿಕೊಂಡರು...
ನಿಮಗೆ ಗ್ರಂಥವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.
ನನಗೆ ಸಂಸ್ಕೃತ ಬರುವುದಿಲ್ಲ. ಅದರಿಂದ ಪಾಠವು ಅರ್ಥವಾಗುತ್ತಿಲ್ಲ.
ಮುಂದಿನ ಪಾಠದಿಂದ...
ಅವರು ಸಂಸ್ಕೃತದಲ್ಲಿ ಹೇಳುತ್ತಿರುವುದರ ಅರ್ಥ ನನಗೆ ಸ್ಪಷ್ಟವಾಗಿ ಗೋಚರವಾಗುತ್ತಿದೆ!
ಗುರುಗಳ ಮಾತುಗಳ ಪ್ರಭಾವ ಯಾವ ಮಟ್ಟದ್ದಾಗಿತ್ತೆಂದರೆ, ಮುಂದಿನ ದಿನದಿಂದ ಆಕೆಗೆ ತರಗತಿಯಲ್ಲಿ ಹೇಳಿಕೊಡುತ್ತಿದ್ದ ಪಾಠವು ಅರ್ಥವಾಯಿತು. ಅಷ್ಟೇ ಅಲ್ಲದೆ ಮೊದಲ ದಿನ ಹೇಳಿಕೊಟ್ಟ ಪಾಠದ ತಾತ್ಪರ್ಯವೂ ತಾನಾಗೇ ಅರ್ಥವಾಯಿತು.


ಒಮ್ಮೆ ಪೂಜ್ಯರು ಶೃಂಗೇರಿಯಿಂದ ಬೆಂಗಳೂರಿಗೆ ಹೊರಡಲಿದ್ದಾಗ, ಹೃಷಿಕೇಶದಿಂದ ಯುವ ಬ್ರಹ್ಮಚಾರಿಯು ಬಂದನು. ಅವನು ಪೂಜ್ಯರ ಶಿಷ್ಯನೊಬ್ಬನೊಡನೆ ಮಾತನಾಡಿದನು.
ನನಗೆ ಶಾಸ್ತ್ರವನ್ನು ಕುರಿತು ಏಳು ಸಂಶಯಗಳಿವೆ. ಅನೇಕ ಪಂಡಿತರನ್ನು ಕೇಳಿದ್ದೇನೆ ಆದರೆ ಅವರಾರೂ ನಿವಾರಿಸಲಿಲ್ಲ. ವಾರಣಾಸಿಯಲ್ಲಿ ಒಬ್ಬ ಪಂಡಿತರು ನನಗೆ ಹೇಳಿದರು...
ಶೃಂಗೇರಿಯ ಜಗದ್ಗುರುಗಳು ನಿನಗೆ ಉತ್ತರಗಳನ್ನು ನೀಡಲಾಗದಿದ್ದರೆ, ಈ ಪ್ರಪಂಚದಲ್ಲಿ ಇನ್ನುಯಾರಿಂದಲೂ ಸಾಧ್ಯವಿಲ್ಲ!
ಶಿಷ್ಯನು ಪೂಜ್ಯರಿಗೆ ಈ ವಿಷಯವನ್ನು ತಿಳಿಸಿದನು. ಆಗ ಸಮಯವಿಲ್ಲದ ಕಾರಣ ಬ್ರಹ್ಮಚಾರಿಯು ತಮ್ಮನ್ನು ಬೆಂಗಳೂರಿನಲ್ಲಿಯೇ ಭೇಟಿಯಾಗುವಂತೆ ಪೂಜ್ಯರು ತಿಳಿಸಿದರು.
ಸ್ವಲ್ಪ ಸಮಯದಲ್ಲಿ ಪ್ರಯಾಣಕ್ಕೆ ಸಿದ್ಧರಾಗಿ ಪೂಜ್ಯರು ಹೊರಗೆ ಬಂದರು. ಆ ಬ್ರಹ್ಮಚಾರಿಯನ್ನು ನೋಡಿ...
ಸಂತೋಷವಾಗಿರು!
...
ಕಾರಿನಲ್ಲಿ...
ಆ ಹುಡುಗನನ್ನು ನೋಡಿದಾಗ ಅವನ ಶ್ರದ್ಧೆಯಿಂದ ಪ್ರಭಾವಿತನಾದೆ. ಆದ್ದರಿಂದ ನಾನು ಶಾರದಾಂಬೆಯನ್ನು ಅವನಿಗೆ ತಕ್ಷಣವೇ ಉತ್ತರಗಳು ದೊರೆಯಲೆಂದು ಪ್ರಾರ್ಥಿಸಿದೆ.
ಪೂಜ್ಯರು ಆಶೀರ್ವಾದ ಮಾಡಿದಾಗಲೇ ತನ್ನ ಎಲ್ಲಾ ಪ್ರಶ್ನೆಗಳಿಗೂ ಉತ್ತರ ದೊರಕಿತು ಎಂದು ಆತ ನನಗೆ ಹೇಳಿದ!
ಪೂಜ್ಯರು ಪ್ರಕಟವಾಗಿ ಹೇಳಿಕೊಟ್ಟರೆ ಮಾತ್ರ ಶಿಷ್ಯನು ಕಲಿಯುವನು ಎಂದಿರಲಿಲ್ಲ. ಅವರ ಅನುಗ್ರಹವೇ ಸಾಕಾಗುತ್ತಿತ್ತು.




ಪೂಜ್ಯರು ಯಾವ ಪ್ರಮಾಣಕ್ಕೆ ಆಧ್ಯಾತ್ಮಶಕ್ತಿಯ ಭಂಡಾರವಾಗಿದ್ದರೆಂದರೆ ಸಂಕಲ್ಪಮಾತ್ರದಿಂದಲೇ ನಿರ್ವಿಕಲ್ಪ ಸಮಾಧಿ ಮತ್ತು ಜೀವನ್ಮುಕ್ತಿಯನ್ನೂ ಅನುಗ್ರಹಿಸಲು ಸಮರ್ಥರಾಗಿದ್ದರು.




ಪೀಠಕ್ಕೆ ಬಹಳ ಪ್ರತಿಭಾವಂತರಾದ, ಬ್ರಹ್ಮಚರ್ಯೆಯಲ್ಲಿ ಸ್ಥಿರವಾಗಿದ್ದ ಸೀತಾರಾಮಾಂಜನೇಯುಲು ಅವರನ್ನು ಪೂಜ್ಯರು ತಮ್ಮ ಉತ್ತರಾಧಿಕಾರಿ ಶಿಷ್ಯರನ್ನಾಗಿ ಆಯ್ಕೆ ಮಾಡಿಕೊಂಡರು.



1974 ನವೆಂಬರ್ 11ರಂದು ಅವರಿಗೆ ಪರಮಹಂಸಸಂನ್ಯಾಸ ದೀಕ್ಷೆಯನ್ನು ನೀಡಿ, ಪೂಜ್ಯರು ಅವರಿಗೆ “ಶ್ರೀ ಭಾರತೀ ತೀರ್ಥ” ಎಂಬ ಅಭಿಧಾನವನ್ನು ಅನುಗ್ರಹಿಸಿದರು.


ಎಳೆಯ ಪ್ರಾಯದ ಜಗದ್ಗುರುಗಳು ಕಠೋರವಾದ ತಪಸ್ಸನ್ನು ಅಭ್ಯಾಸ ಮಾಡಿ ಪೂಜ್ಯರಿಂದಲೇ ಶಾಸ್ತ್ರಗಳನ್ನೂ ಕಲಿತರು. ತಮ್ಮ ಗುರುಗಳ ಜೊತೆಗೆ ಹಲವಾರು ಯಾತ್ರೆಗಳನ್ನು ಕೈಗೊಂಡರು. ಅವರಿಗೆ ತಮ್ಮ ಗುರುಗಳಲ್ಲಿ ಅಪಾರ ಭಕ್ತಿ.




ಅವರು ವರ್ಷಾಂತರಗಳಲ್ಲಿ ಜನರ ಶಾಶ್ವತಶ್ರೇಯಸ್ಸಿಗಾಗಿ ಸನಾತಧರ್ಮವನ್ನು ಕಾಪಾಡಿ, ಅದನ್ನು ದೇಶಾದ್ಯಂತ ವಿಸ್ತರಿಸುವ ತಮ್ಮ ಗುರುಗಳು ಪ್ರಾರಂಭಿಸಿದ ಕಾರ್ಯವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.



ಶಾಸ್ತ್ರಗಳಲ್ಲಿ ಪ್ರಕಾಂಡ ಪಂಡಿತರು ಎಂಬ ಪ್ರಖ್ಯಾತಿಯನ್ನು ಹೊಂದಿದ್ದು ಮತ್ತು ಸದ್ಗುಣಗಳಿಂದ ಕೂಡಿರುವ ಅವರನ್ನು, ಸಂತರು, ಪಂಡಿತರು, ಶಾಸನಾಧ್ಯಕ್ಷರು ಮತ್ತು ಸಾಮಾನ್ಯ ಜನರು ಗೌರವಾದರದಿಂದ ನೋಡುತ್ತಾರೆ. ತಮ್ಮ ನಿರುಪಮ ಗುರುಗಳಿಗೆ ಅಚ್ಚುಮೆಚ್ಚಿನ ಪ್ರಥಮಶಿಷ್ಯಂದಿರು ಪೀಠಕ್ಕೆ ಯೋಗ್ಯ ಉತ್ತರಾಧಿಕಾರಿಗಳಾಗಿದ್ದಾರೆ.


ಪೂಜ್ಯರು ವೃದ್ಧಾವಸ್ಥೆಯಲ್ಲಿಯೂ ಪ್ರತಿದಿನ ಹಗಲಿರುಳು ಎಂಬಂತೆ ಕಷ್ಟಪಡುತ್ತಿದ್ದುದನ್ನು ಗಮನಿಸಿದ ಭಕ್ತರೊಬ್ಬರು ಕೇಳಿಯೇಬಿಟ್ಟರು...
ಈ ವಯಸ್ಸಿನಲ್ಲಿಯಾದರೂ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬಾರದೆ?
ಬೆಲ್ಲ ಮತ್ತು ಬಾದಾಮಿ ಹಲ್ವದ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ, ನೀನಾವುದನ್ನು ಆರಿಸಿಕೊಳ್ಳುವೆ?
ಖಂಡಿತವಾಗಿ ಬಾದಾಮಿ ಹಲ್ವವನ್ನೇ!
ಹ್ಞಾ, ಅದೇ! ಪರಮಾನಂದದ ರುಚಿಯನ್ನು ನೋಡಿರುವವರು ಈ ಐಹಿಕ ಸುಖಗಳಿಗೆ ಆಸೆ ಪಡುವುದಿಲ್ಲ.
1982ರಲ್ಲಿ ಪೂಜ್ಯರು ತೀವ್ರವಾದ ಎದೆಯ ನೋವನ್ನು ಅನುಭವಿಸಿದರು. ಅತಿ ಹೆಚ್ಚು ಪ್ರಮಾಣದ ಔಷಧಿಗಳನ್ನು ಕೊಟ್ಟ ಕಾರಣದಿಂದ, ಅರ್ಧ-ಮೂರ್ಛಾವಸ್ಥೆಗೆ ಇಳಿದರು. ಅವರಿಗೆ ತಮ್ಮ ಸುತ್ತುಮುತ್ತಲಿನ ಅರಿವು ಅಷ್ಟಾಗಿ ಇಲ್ಲದಿದ್ದರೂ, ಸಂಸ್ಕೃತ ಶ್ಲೋಕವನ್ನು ಮೆಲ್ಲಗೆ ಹೇಳಲಾರಂಭಿಸಿದರು...
ಮನಸ್ಸು ಧ್ಯಾನದಲ್ಲಿ ಲೀನವಾಗಿರಲಿ ಅಥವಾ ಮಂದಾವಸ್ಥೆಯಲ್ಲಿರಲಿ, ನಾನು ಯಾವುದರಿಂದಲೂ ಕಲುಷಿತವಾಗದ ಆತ್ಮ. ನನ್ನ ಮನಸ್ಸಿನಿಂದಾದ ಪಾಪ ಪುಣ್ಯಗಳು ನನ್ನ ಮೇಲೆ ಯಾವ ಪರಿಣಾಮವೂ ಬೀರುವುದಿಲ್ಲ, ನಾನು ಎಲ್ಲೆಡೆಯೂ ಇರುವ ಪರಬ್ರಹ್ಮ.
ಪರಬ್ರಹ್ಮನಲ್ಲಿ ಲೀನತೆಯು ಅಷ್ಟು ಆಳವಾಗಿತ್ತು.
ಒಂದು ಸಲ ಪೂಜ್ಯರು ತಮ್ಮ ವೈದ್ಯರಿಗೆ ಉಸಿರಾಟದ ತೊಂದರೆ ಪ್ರಾರಂಭವಾಗಿರುವುದರ ಬಗ್ಗೆ ತಿಳಿಸಿದರು.
ಆಯುರ್ವೇದವೈದ್ಯರೊಬ್ಬರು ನನಗೆ ಚಿಕಿತ್ಸೆ ನೀಡುತ್ತಿದ್ದಾರೆ. ಅವರ ಔಷಧಿಯು ಬಹಳ ಪರಿಣಾಮಕಾರಿಯಾಗಿದೆ.
ನಂತರ ಒಂದು ದಿನ...
ಆ ಉಸಿರಾಟದ ತೊಂದರೆ ಹತೋಟಿಯಲ್ಲಿದೆಯೇ?
ಓ, ಆ ತೊಂದರೆ ಮತ್ತೆ ಬಂದಿದೆ. ಆಯುರ್ವೇದದ ಔಷಧವನ್ನು ನಿಲ್ಲಿಸಿರುವೆನಲ್ಲ.
ಆ ವೈದ್ಯರಿಗೆ ಬಹಳ ವಯಸ್ಸಾಗಿದೆ. ಔಷಧಿಯನ್ನು ತಯಾರಿಸಲು ಬೇಕಾದ ವಸ್ತುಗಳನ್ನು ಪಡೆಯಲು ತುಂಬಾ ಶ್ರಮ ಪಡಬೇಕಾಗುತ್ತದೆ. ಅವರಂತೂ ನನಗೋಸ್ಕರ ಔಷಧಿಯನ್ನು ಮಾಡುತ್ತೇನೆ ಎಂದೇ ಹೇಳುತ್ತಾರೆ. ಆದರೆ ಅವರಿಗೆ ತೊಂದರೆಯಾಗುವುದು ನನಗೆ ಇಷ್ಟವಿಲ್ಲ.
ಅವರ ಅನುಕಂಪ ಎಂತಹದ್ದೆಂದರೆ ತಮ್ಮ ಆರೋಗ್ಯಕ್ಕಿಂತಲೂ ವೈದ್ಯರ ಯೋಗಕ್ಷೇಮದ ಬಗ್ಗೆಯೇ ಅವರಿಗೆ ಹೆಚ್ಚು ಕಾಳಜಿ!

1989ರ ಸೆಪ್ಟೆಂಬರ್ ನಲ್ಲಿ ಪೂಜ್ಯರ ಅನಾರೋಗ್ಯವು ತೀವ್ರಗೊಂಡಿತು. ಅವರ ಕೋಣೆಯ ಹೊರಗೆ ಮಲಗಿದ್ದ ಸೇವಕನಿಗೆ ಮಧ್ಯರಾತ್ರಿ ಎಚ್ಚರವಾದಾಗ...





ಸದ್ದಿಲ್ಲದೆ ಪೂಜ್ಯರ ಕೋಣೆಗೆ ತೆರಳಿ ನೋಡಿದಾಗ ಅವರು ಎಚ್ಚರವಾಗಿಯೇ ಇದ್ದು, ಬಹಳಷ್ಟು ನೋವು ಅನುಭವಿಸುತ್ತಿದ್ದುದನ್ನು ನೋಡಿದನು. ಆದರೆ, ಪೂಜ್ಯರು ಮೆಲ್ಲಗೆ ದೇವರ ಹೆಸರನ್ನು ಜಪಿಸುತ್ತಿದ್ದರು. ಸೇವಕನನ್ನು ನೋಡಿ...





ನೋವನ್ನು ಅನುಭವಿಸುತ್ತಿದ್ದಾಗಲೂ ಪೂಜ್ಯರಿಗೆ ಬೇರೆಯವರ ಬಗ್ಗೆಯೇ ಅತೀವ ಕಾಳಜಿ. ತಮ್ಮ ವಿಷಯಕ್ಕೇ ಬಂದಾಗ, ಶರೀರವು ತನ್ನ ಯಾತ್ರೆಯನ್ನು ಸಮಾಪ್ತಿಗೊಳಿಸಲಿ ಎಂಬ ಭಾವನೆಯಿಂದ ಇದ್ದರು.


1989 ಸೆಪ್ಟೆಂಬರ್ 21ರಂದು, ಎಪ್ಪತ್ತೊಂದು ವರ್ಷಗಳಾಗಿದ್ದಾಗ, ಪೂಜ್ಯರು ತಮ್ಮ ದೇಹವನ್ನು ತ್ಯಜಿಸಲು ಸಮಯವೆಂದು ನಿರ್ಧರಿಸಿದರು.




ಪೂಜ್ಯರು ಒಮ್ಮೆ ಭಕ್ತರೊಬ್ಬರಿಗೆ ಹೇಳಿದ್ದರು...




ಅಸಾಧಾರಣ ತಪಸ್ವಿಗಳಾಗಿ ಈ ಪವಾಡವನ್ನು ಅಸಂಖ್ಯಾತ ಬಾರಿ ಮಾಡಿದ್ದ ಪೂಜ್ಯರು ಸರ್ವರಿಗೂ ಮಾರ್ಗದರ್ಶಕವಾದ ಹಾಗೂ ವಿಸ್ಮಯವನ್ನುಂಟುಮಾಡುವ ಜೀವನವನ್ನು ನಡೆಸಿದ್ದರು.



ಅವರು ಭೌತಿಕವಾಗಿ ಇಲ್ಲದೆ ಇದ್ದರೂ, ಅವರ ಬಗ್ಗೆ ಭಕ್ತಿಯಿಂದ ಚಿಂತನೆ ಮಾತ್ರ ಮಾಡಿದವರಿಗೆ ಇಂದಿಗೂ ಅಪಾರವಾಗಿ ಅನುಗ್ರಹಿಸುತ್ತಿದ್ದಾರೆ.


ಬೋಧನೆಗಳು
ಭಗವಂತನ ಕೃಪೆಯು ಅಪಾರ. ಅದರಿಂದ ನಮ್ಮನ್ನು ನಾವು ಅವನಿಗೆ ಅರ್ಪಿಸಿಕೊಂಡರೆ ಏನೇ ಕುಂದು-ಕೊರತೆಗಳಿದ್ದರೂ ನಮ್ಮನ್ನು ಸ್ವೀಕರಿಸುತ್ತಾನೆ.
“ಹೇಗೆ ನನಗೆ ಕಷ್ಟಗಳನ್ನು ಅನುಭವಿಸುವುದಕ್ಕೆ ಇಷ್ಟವಿಲ್ಲವೋ ಅದೇ ರೀತಿ ಬೇರೆಯವರಿಗೂ ಯಾವ ಕಷ್ಟವೂ ಬರದಿರಲಿ” - ನಮ್ಮ ಯೋಚನೆ ಹೀಗಿರಬೇಕು.
ದಾನ ಮಾಡುವುದು ಬೇರೆಯವರಿಗೆ ಸಂತೋಷವನ್ನು ಉಂಟುಮಾಡುವುದಲ್ಲದೆ, ದಾನಿಯ ಆಧ್ಯಾತ್ಮದ ಏಳಿಗೆಗೆ ಅಗಾಧವಾಗಿ ನೆರವಾಗುತ್ತದೆ.
ಸತ್ಯವನ್ನು ನುಡಿಯಬೇಕು. ಹಾಗೂ ಮಾತುಗಳು ಪ್ರಿಯವಾಗಿದ್ದು ಬೇರೆಯವರಿಗೆ ಹಿತವನ್ನುಂಟುಮಾಡು-ವಂತಿರಬೇಕು.
ಇತರರಿಗೆ ಸಹಾಯ ಮಾಡುವುದಕ್ಕೆ ನಮಗೆ ಸಾಮರ್ಥ್ಯವಿರುವಾಗ, ನಾವು ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು.
ಭೌತಿಕ ಸಂಪತ್ತು ಸಾಧಾರಣ ಜನರ ಐಶ್ವರ್ಯವಾದರೆ, ಅದರ ಅಭಾವವೇ ಜ್ಞಾನಿಗಳ ಸಂಪತ್ತು.
ಕೆಣಕಿದಾಗಲೂ ನಾವು ವಿಚಲಿತರಾಗದಿದ್ದರೆ, ಶ್ರೇಷ್ಠರಾಗುತ್ತೇವೆ.
ಕೆಟ್ಟ ಪ್ರವೃತ್ತಿಯು ನಿಮ್ಮನ್ನು ಹಾನಿಯತ್ತ ಒಯ್ಯುತ್ತಿದ್ದರೆ, ಪುರುಷ ಪ್ರಯತ್ನದಿಂದ ಅದನ್ನು ಮೀರಬೇಕು.
ಭಗವಂತನೇ ಎಲ್ಲವುದರ ಸಾರ.
ಈ ಜಗತ್ತಿನಲ್ಲಿ ನಿಂದನೆಗಾಗಲಿ ಅಥವಾ ಪ್ರಶಂಸೆಗಾಗಲಿ ಯಾವ ಮೌಲ್ಯವೂ ಇಲ್ಲ.
ಭಗವಂತನ ಕರುಣೆಯು ಎಲ್ಲರಿಗೂ ವ್ಯಾಪಿಸುತ್ತದೆ.
ಬೇರೆಯವರಿಗೆ ಉಪಕಾರವನ್ನು ಮಾಡುವುದು ಸಂತರ ಸ್ವಭಾವ.
ನಾವು ದೇವರಿಗೆ ಎಲ್ಲವನ್ನೂ ಸಮರ್ಪಿಸಿ ಚಿಂತೆ ಇಲ್ಲದೆ ಇರಬೇಕು.
ಯಾವಾಗಲೂ ಭಗವಂತನ ಬಗ್ಗೆ ಚಿಂತಿಸುತ್ತಿರಬೇಕು.
ಬೇರೆಯವರಲ್ಲಿರುವ ಒಳ್ಳೆಯ ಗುಣಗಳನ್ನ ಗುರುತಿಸಬೇಕು, ಕೊರತೆಗಳನ್ನು ಕಲ್ಪಿಸಬಾರದು ಅಥವಾ ಹುಡುಕಬಾರದು.